

# ಸಿಹಿ ಕಹಿ


ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 | Issue : 241 | Wednesday 04-06-2025 | E-mail : maruti.b.hosamani76@gmail.com | Page: 4 | Price : Rs. 1/-


## ಎಲೆ ಮರೆಯ ಕಾಯಿಯಂತೆ ಸೇವೆ ಮಾಡಿದ ಸಾಧಕರನ್ನು ಗುರುತಿಸಿ ಗೌರವಿಸ ಬೇಕಿದೆ – ಸುಧಾ ಪ್ರಹ್ಲಾದ್ ಅಭಿಪ್ರಾಯ

**ಸಿಹಿ ಕಹಿ ಸುದ್ದಿ,**
**ಚಳ್ಳಕೆರೆ ಜೂ.03 :** ಎಲೆ ಮರೆಯ ಕಾಯಿಯಂತೆ ಸಮಾಜಕ್ಕೆ ಸೇವೆ ಸಲ್ಲಿಸಿದ ಸಾಧಕರನ್ನು ಗುರುತಿಸಿ ಗೌರವಿಸುವ ಕೆಲಸವನ್ನು ನಾವೆಲ್ಲರೂ ಸೇರಿ ಮಾಡಬೇಕಿದೆ ಎಂದು ಚಳ್ಳಕೆರೆ ತಾಲೂಕು ಇನ್ನರ್ ವಿಲ್ ಸಂಸ್ಥೆಯ ಮಹಿಳಾ ಮಣಿಗಳ ಅಧ್ಯಕ್ಷರಾದ ಸುಧಾ ಪ್ರಹ್ಲಾದ್ ಅಭಿಪ್ರಾಯ ಪಟ್ಟರು.



ತಾಲೂಕಿನ ಕಾಲುವೆಹಳ್ಳಿ ಗ್ರಾಮದ ಶತಾಯುಷಿ ಸೂಲಗಿತ್ತಿ ತಳುಕಿನ ತಿಮ್ಮಕ್ಕ ಮತ್ತು ಅವರ ಕುಟುಂಬಕ್ಕೆ ಇನ್ನರ್ ವಿಲ್ ಸಂಸ್ಥೆಯ ವತಿಯಿಂದ ಆಹಾರ ಪದಾರ್ಥಗಳು, ಚೇರ್, ಹಾಸಿಗೆ ಹೊದಿಕೆ, ಸೀರೆ ಹಾಗೂ ಸನ್ಮಾನಿಸಿ ಅವರು ಮಾತನಾಡಿದರು. ಇನ್ನರ್ ವಿಲ್ ಸಂಸ್ಥೆಯ ಖಜಾಂಚಿ ಪದ್ಮ ನಾಗರಾಜ್ ಮಾತನಾಡಿ ಶತಾಯುಷಿ ಸೂಲಗಿತ್ತಿ ತಳುಕಿನ ತಿಮ್ಮಕ್ಕನವರು ಐವತ್ತು ವರ್ಷಗಳ ಕಾಲ ಕಾಲುವೆಹಳ್ಳಿಯ ಸುತ್ತ ಮುತ್ತಲಿನ ಗ್ರಾಮಗಳಲ್ಲಿ ಸಾವಿರಾರು ಉಚಿತ ಹೆರಿಗೆ ಮಾಡಿಸಿದರೂ ಅವರನ್ನು ಇಷ್ಟು ವರ್ಷಗಳ ಕಾಲ ಸಮಾಜದ ಜನರು ಗುರುತಿಸದೆ ಇದ್ದದ್ದು ಬಹಳ ಬೇಸರದ ವಿಷಯ. ಹೀಗಲಾದರೂ ಇನ್ನರ್ ವಿಲ್ ಸಂಸ್ಥೆಯ ಮೂಲಕ ಅವರನ್ನು ಗುರುತಿಸಿ ಸನ್ಮಾನಿಸುತ್ತಿರುವುದು ಬಹಳ ಸಂತೋಷ ತಂದಿದೆ ಎಂದು ತಿಳಿಸಿದರು. ಮುಂದಿನ ದಿನಗಳಲ್ಲಿ ಇನ್ನರ್ ವಿಲ್ ಸಂಸ್ಥೆಯ ಮೂಲಕ ಇನ್ನಷ್ಟು ನೆರವನ್ನು ನೀಡಲಾಗುವುದು ಎಂದು ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷರು, ಸದಸ್ಯರು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಪ್ರಾರ್ಥನೆಯನ್ನು ಬೋರಣ್ಣ ಮಾಡಿದರೆ ಯತೀಶ್.ಎಂ ಸಿದ್ದಾಪುರ ಅವರು ಎಲ್ಲರನ್ನು ಸ್ವಾಗತಿಸಿ ವಂದಿಸಿದರು. ಕಾರ್ಯಕ್ರಮದಲ್ಲಿ ಇನ್ನರ್ ವಿಲ್ ಸಂಸ್ಥೆಯ ನಾಗಶ್ರೀ ಶ್ರೀನಿಧಿ, ಅರುಣ ಸುಬ್ಬರಾಜ್, ಡಾ, ವಿದ್ಯಾ, ಚಂದ್ರಕಲಾ ಹನುಮಂತಪ್ಪ, ಮೀರಾ ರಮೇಶ್, ಸುಜಾತ, ಅನಿತಾ ಶಶಿಧರ್, ಸೌರಭಿ, ಮಲ್ಲಿಕಾರ್ಜುನ, ಬ್ರಹ್ಮಪಾಲಕ್ಕ, ಯತೀಶ್.ಎಂ ಸಿದ್ದಾಪುರ, ಬೋರಣ್ಣ,ಮಂಜುಳ ಜಯಪಾಲ, ಗೌತಮಿ, ಮೌನಶ್ರೀ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

**ವರದಿ–ಯತೀಶ್.ಎಂ ಸಿದ್ದಾಪುರ, ಚಳ್ಳಕೆರೆ.**

## ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ವನಸಿರಿ ಪೌಂಡೇಷನ್ ವತಿಯಿಂದ ಉಚಿತವಾಗಿ 5 ಸಾವಿರ ಸಸಿಗಳ ವಿತರಣೆ

**ಸಿಹಿ ಕಹಿ ಸುದ್ದಿ,**
**ಸಿಂಧನೂರು ಜೂ.03 :** ನಗರದ ಕಘಾಅ ಕ್ಯಾಂಪ್ ನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಕಾರ್ಯಾಲಯ ಹತ್ತಿರ ಸರಕಾರಿ ಶಾಲೆಗಳನ್ನು ಹಸಿರುಕರಣ ಗೊಳಿಸಲು ವನಸಿರಿ ಫೌಂಡೇಶನ್ ನಿಂದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ 5 ಸಾವಿರ ಸಸಿಗಳ ವಿತರಣೆ ಕಾರ್ಯಕ್ರಮವನ್ನು ಇದೇ ಜೂನ್ 4 ರಂದು ಹಮ್ಮಿಕೊಳ್ಳಲಾಗಿದೆ. ಎಂದು ವನಸಿರಿ ಫೌಂಡೇಶನ್ ಸದಸ್ಯ ಚನ್ನಪ್ಪ.ಕೆ ಹೊಸಹಳ್ಳಿ ಅವರು ತಿಳಿಸಿದರು.

ಸಿಂಧನೂರು ನಗರದ ವನಸಿರಿ ಫೌಂಡೇಶನ್ ಕಾರ್ಯಾಲಯದಲ್ಲಿ ಮಾತನಾಡಿದ ಪರಿಸರ ಪ್ರೇಮಿ, ವನಸಿರಿ ಫೌಂಡೇಶನ್ ಸದಸ್ಯ ಚನ್ನಪ್ಪ.ಕೆ ಹೊಸಹಳ್ಳಿ ಅವರು ಹಲವಾರು ವರ್ಷಗಳಿಂದ ಸರಕಾರಿ ಶಾಲೆಗಳ ಹಸಿರುಕರಣ ಮಾಡಲು



ವನಸಿರಿ ಪೌಂಡೇಷನ್ ತಂಡ ಶ್ರಮಿಸುತ್ತಿದೆ. ನಮ್ಮ ಕಲ್ಯಾಣ ಕರ್ನಾಟಕ ಭಾಗದಲ್ಲಿ ಹೆಚ್ಚು ಬಿಸಿಲಿನ ತಾಪಮಾನ ಹೊಂದಿದ್ದು, ಇದನ್ನು ತಗ್ಗಿಸುವ ಸಲುವಾಗಿ ಪ್ರತಿ ವರ್ಷ ಸುಮಾರು 1 ಲಕ್ಷ ಗಿಡಗಳನ್ನು ನೆಡುವ ಗುರಿಯನ್ನು ಹೊಂದಲಾಗಿದೆ. ಅದರಲ್ಲೂ ಸರಕಾರಿ ಶಾಲೆಗಳನ್ನೇ ಹಸಿರುಕರಣ ಮಾಡಲು ಮೊದಲ ಆದ್ಯತೆ ನೀಡುತ್ತಿದ್ದೇವೆ. ಇದೇ ಜೂನ್ 5 ರಂದು ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಎಲ್ಲಾ ಸರಕಾರಿ ಶಾಲೆಗಳಲ್ಲಿ ಕಡ್ಡಾಯವಾಗಿ ಗಿಡ ಮರಗಳನ್ನು ಬೆಳಸಬೇಕು ಎಂಬ ಸದುದ್ದೇಶದಿಂದ ನಮ್ಮ ವನಸಿರಿ ತಂಡದಿಂದ ಪ್ರತಿ ವರ್ಷದಂತೆ ಈ ವರ್ಷವೂ ಕೂಡಾ 5 ಸಾವಿರ ಸಸಿಗಳನ್ನು ಸರಕಾರಿ ಶಾಲೆಗಳಲ್ಲೇ ನೆಡಬೇಕೆಂಬುದು ನಮ್ಮ ಧ್ಯೇಯವಾಗಿದೆ. ಇದೇ ಜೂನ್ 4 ರಂದು ಸಿಂಧನೂರು ನಗರದ ಕಘಾಅ ಕ್ಯಾಂಪ್ ನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಕಾರ್ಯಾಲಯದ ಹತ್ತಿರ 5 ಸಾವಿರ ಸಸಿಗಳನ್ನು ಉಚಿತವಾಗಿ ನೀಡುತಿದ್ದೇವೆ. ಎಲ್ಲಾ ಸರಕಾರಿ ಶಾಲೆಗಳ ಶಿಕ್ಷಕರು, ಇದರ ಸದುಪಯೋಗವನ್ನು ಪಡೆದು ಕೊಳ್ಳಬೇಕು ಎಂದು ಮನವಿ ಮಾಡಿದರು.

## ಬಕ್ರೀದ್ ಹಬ್ಬದ ಪ್ರಯುಕ್ತ–ಶಾಂತಿ ಸಭೆ

**ಸಿಹಿ ಕಹಿ ಸುದ್ದಿ,**
**ಕಲಕೇರಿ ಜೂ.03 :** ತಾಳಿಕೋಟೆ ತಾಲೂಕಿನ ಕಲಕೇರಿ ಪೊಲೀಸ್ ಠಾಣೆಯಲ್ಲಿ ಬಕ್ರೀದ್ ಹಬ್ಬದ ಶಾಂತಿ ಸಭೆ ಕಲಕೇರಿ ಪೊಲೀಸ್ ಠಾಣೆಯ ಪಿ.ಎಸ್.ಐ ಸುರೇಶ್ ಮಂಟೂರ್ ಇವರು ಬಕ್ರೀದ್ ಹಬ್ಬದ ಶಾಂತಿ ಸಭೆ ನಿಮಿತ್ಯವಾಗಿ ಎಲ್ಲಾ ಕಲಕೇರಿ ಗ್ರಾಮದ ಮುಸ್ಲಿಂ ಬಾಂಧವರಿಗೆ ಹಾಗೂ ಊರಿನ ಎಲ್ಲಾ ನಾಗರಿಕರಿಗೆ ಬಕ್ರೀದ್ ಹಬ್ಬವನ್ನು ಶಾಂತಿ ರೀತಿಯಿಂದ ನಡೆಯಬೇಕು ಯಾವ ಘಟನೆಗಳು ನಡೆಯದಂತೆ ನಾವೆಲ್ಲಾ ಶಾಂತಿಯಿಂದ ಹಬ್ಬವನ್ನು ಆಚರಿಸಬೇಕು ಎಂದು ಈ ಸಂದರ್ಭದಲ್ಲಿ ತಿಳಿಸಿದರು.



ಕಲಕೇರಿಯ ಪೊಲೀಸ್ ಠಾಣೆ–ಯ ಕ್ರೈಂ ಪಿ.ಎಸ್.ಐ ಸಂಗಮೇಶ್ ತಳವಾರ್ ಸರ್ ಎಲ್ಲಾ ಊರಿನ ಹಿರಿಯರಿಗೆಮುಸ್ಲಿಂಬಾಂಧವರಿಗೆ ಬಕ್ರೀದ್ ಹಬ್ಬದ ನಿಮಿತ್ಯವಾಗಿ ತಾವೆಲ್ಲರೂ ಶಾಂತಿ ರೀತಿಯಿಂದ ಹಬ್ಬವನ್ನು ಆಚರಿಸಬೇಕು ಯಾವ ಘಟನೆಗಳು ನಡೆಯದಂತೆ ಶಾಂತಿ ರೀತಿಯಿಂದ ಬಕ್ರೀದ್ ಹಬ್ಬವನ್ನು ಆಚರಿಸಬೇಕು ಎಂದು ಈ ಸಂದರ್ಭದಲ್ಲಿ ತಿಳಿಸಿದರು.

ಊರಿನ ಮುಖಂಡರಾದ ಜಹಾಂಗೀರ್ ಪಾಷಾ ಸಿರಸಗಿ. ರಫೀಕ್ ಮುಲ್ಲಾ. ನಬಿಲಾಲ್ ಕ್ಯಾಪ್ಟನ್ ಟೇಲರ್. ಕಾಸಿಂಸಾಬ್ ನಾಯ್ಕೋಡಿ. ಪರಶುರಾಮ್ ವಡ್ಡರ್. ಲಾಳ ಮಸಾಕ್ ನಾಯ್ಕೋಡಿ. ಚಂದ್ ಪಾಷಾ ಹವಾಲ್ದಾರ್. ತಾಳಿಕೋಟಿ ತಾಲೂಕಿನ ಕಲಕೇರಿ ಪೊಲೀಸ್ ಠಾಣೆಯಲ್ಲಿ ಬಕ್ರೀದ್ ಹಬ್ಬದ ಶಾಂತಿ ಸಭೆ ಕಲಕೇರಿ ಪೊಲೀಸ್ ಠಾಣೆಯ ಪಿ.ಎಸ್.ಐ. ಸುರೇಶ್ ಮಂಟೂರ್ ಇವರು ಬಕ್ರೀದ್ ಹಬ್ಬದ ಶಾಂತಿ ಸಭೆ ನಿಮಿತ್ಯವಾಗಿ ಎಲ್ಲಾ ಕಲಕೇರಿ ಗ್ರಾಮದ ಮುಸ್ಲಿಂ ಬಾಂಧವರಿಗೆ ಹಾಗೂ ಊರಿನ ಎಲ್ಲಾ ನಾಗರಿಕರಿಗೆ ಬಕ್ರೀದ್ ಹಬ್ಬವನ್ನು ಶಾಂತಿ ರೀತಿಯಿಂದ ನಡೆಯಬೇಕು ಯಾವ ಘಟನೆಗಳು ನಡೆ–ಯದಂತೆ ನಾವೆಲ್ಲ ಶಾಂತಿಯಿಂದ ಹಬ್ಬವನ್ನು ಆಚರಿಸಬೇಕು ಎಂದು ಈ ಸಂದರ್ಭದಲ್ಲಿ ತಿಳಿಸಿದರು.

ಕಲಕೇರಿಯ ಪೊಲೀಸ್ ಠಾಣೆ–ಯ ಕ್ರೈಂ ಪಿ.ಎಸ್.ಐ ಸಂಗಮೇಶ್ ತಳವಾರ್ ಸರ್ ಎಲ್ಲಾ ಊರಿನ ಹಿರಿಯರಿಗೆಮುಸ್ಲಿಂಬಾಂಧವರಿಗೆ ಬಕ್ರೀದ್ ಹಬ್ಬದ ನಿಮಿತ್ಯವಾಗಿ ತಾವೆಲ್ಲರೂ ಶಾಂತಿ ರೀತಿಯಿಂದ ಹಬ್ಬವನ್ನು ಆಚರಿಸಬೇಕು ಯಾವ ಘಟನೆಗಳು ನಡೆಯದಂತೆ ಶಾಂತಿ ರೀತಿಯಿಂದ ಬಕ್ರೀದ್ ಹಬ್ಬವನ್ನು ಆಚರಿಸಬೇಕು ಎಂದು ಈ ಸಂದರ್ಭದಲ್ಲಿ ತಿಳಿಸಿದರು.

ಊರಿನ ಮುಖಂಡರಾದ ಜಹಾಂಗೀರ್ ಪಾಷಾ ಸಿರಸಗಿ. ದಾವಲ್ ನಾಯ್ಕೋಡಿ. ರಫೀಕ್ ಮುಲ್ಲಾ. ನಬಿಲಾಲ್ ಕ್ಯಾಪ್ಟನ್ ಟೇಲರ್. ಕಾಸಿಂಸಾಬ್ ನಾಯ್ಕೋಡಿ. ಪರಶುರಾಮ್ ವಡ್ಡರ್. ಲಾಳ ಮಸಾಕ್ ನಾಯ್ಕೋಡಿ. ಚಂದ್ ಪಾಷಾ ಹವಾಲ್ದಾರ್. ಬಾಪು ದೇಸಾಯಿ. ಇರಗಂಟಿ ಬಡಿಗೇರ್. ಅಜೀಜ್ ಮುಲ್ಲಾ. ಮೈಬೂಬ್ ಮೈಕೋಡಿ. ಹಲವಾರು ಊರಿನ ಎಲ್ಲಾ ಗಣ್ಯ ವ್ಯಕ್ತಿಗಳು ಹಾಗೂ ಎಲ್ಲಾ ಮುಸ್ಲಿಂ ಬಾಂಧವರು ಸೇರಿದಂತೆ ಕಲಕೇರಿ ಪೊಲೀಸ್ ಠಾಣೆಯ ಬಕ್ರೀದ್ ಹಬ್ಬದ ಶಾಂತಿ ಸಭೆ ನೆರವೇರಿತು.

**ತಾಲೂಕ ವರದಿಗಾರರು,**
**ಸಿಹಿ ಕಹಿ ಕನ್ನಡ ದಿನ ಪತ್ರಿಕೆ**
**ಹಾಗೂ ಎಸ್.ಕೆ ನ್ಯೂಸ್**
**ಕನ್ನಡ ಚಾನಲ್:**
**ಮೈಬೂಬಬಾಷ.ಮನಗೂಳಿ.**
**ತಾಳಿಕೋಟೆ**

## ನವನಗರ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಜ್ಯಮಟ್ಟದ ಸಂಶೋಧನಾ ಕಮ್ಮಟ ಸಮಾರೋಪ
## ನಾಟಕಗಳಿಂದ ನೈತಿಕ ಸಾಂಸ್ಕೃತಿಕ ಮೌಲ್ಯಗಳ ಅರಿವು: ಡಾ.ಅರುಣಕುಮಾರ ಗಾಳಿ

**ಬಾಗಲಕೋಟೆ :** ನಾಟಕ ಮತ್ತು ಕಲೆ ಶಿಕ್ಷಣದಲ್ಲಿ ಶ್ರೀಮಂತಿಕೆಯ ಪರಂಪರೆ ಹೊಂದಿದ್ದು, ಪ್ರಾಚೀನ ನಾಗರಿಕತೆಗಳಿಂದಲೂ ಇವುಗಳು ನೈತಿಕ ಪಾಠಗಳು ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಜನರಲ್ಲಿ ಜಾಗೃತಿ ಮೂಡಿಸುವಲ್ಲಿ ಸಹಕಾರಿಯಾಗಿವೆ ಎಂದು ಪ್ರಾಚಾರ್ಯರಾದ ಡಾ. ಅರುಣಕುಮಾರ ಗಾಳಿ ಹೇಳಿದರು.



ಅವರು ನವನಗರದಲ್ಲಿರುವ ಸರಕಾರಿ ಪ್ರಥ–ಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ಮಂಗಳವಾರ ಹಂಪಿ ಕನ್ನಡ ವಿಶ್ವವಿದ್ಯಾಲಯ ನಾಟಕ ವಿಭಾಗ, ಗುಳೆದಗುಡ್ಡದ ರಾಷ್ಟ್ರೀಯ ಸಂಶೋಧನಾ ವೇದಿಕೆ, ಇವರುಗಳ ಸಹಯೋಗದಲ್ಲಿ "ಕನ್ನಡ ನಾಟಕಗಳ ವಿಭಿನ್ನ ನೆಲೆಗಳು" ಕುರಿತು ಒಂದು ದಿನದ ರಾಜ್ಯಮಟ್ಟದ ಸಂಶೋಧನಾ ಕಮ್ಮಟದ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ನಾಟಕಗಳು ಶತಮಾನಗಳಿಂದ ಸಾಮಾಜಿ–ಕ ಬದಾಲಾವಣೆಗಳನ್ನು ಪ್ರತಿಬಿಂಬಿಸುವ ವೈವಿಧ್ಯಮಯ ಕತೆ ಹೇಳುವಿಕೆ ಮತ್ತು ದೃಶ್ಯ ಅಭಿವ್ಯಕ್ತಿಯನ್ನು ಒಳಗೊಂಡಂತೆ ವಿಕಸನಗೊಂಡಿದೆ. ಇಂದು ನಾಟಕಗಳು ವಿದ್ಯಾರ್ಥಿಗಳಿಗೆ ಸೃಜನಶೀಲತೆ ಮತ್ತು ವಿಮರ್ಶಾತ್ಮಕ ಚಿಂತನೆಯನ್ನು ಬೆಳೆಸುವಲ್ಲಿ ಅವಿಭಾಜ್ಯ ಅಂಗವಾಗಿದ್ದು, ನಾಟಕಗಳು ಅನುಭವದ ಕಲಿಕೆಯ ಮೂಲಾಧಾರವಾಗಿವೆ ಎಂದು ಹೇಳಿದರು.

ಸಾಹಿತ್ಯ ಅಕಾಡೆಮಿ ಸದಸ್ಯ ಮಹಾದೇವ ಬಸರಕೊಡ ಅವರು ಕಮ್ಮಟದ ಅನಿಸಿಕೆ ಹಂಚಿಕೊಂಡು ಮಾತನಾಡಿ ಕಲೆ ಮತ್ತು ನಾಟಕದ ಮೂಲಕ ವೈವಿಧ್ಯಮಯ ಸಂಪ್ರದಾಯಗಳು, ಇತಿಹಾಸ, ದೃಷ್ಟಿಕೋನಗಳ ಬಗೆಗೆ ಕಲಿಯುವುದು ಸಹಾನುಭೂತಿ ಮತ್ತು ಜಾಗತಿಕ ಜಾಗೃತಿ ಬೆಳೆಸುತ್ತದೆ ಇಂತಹ ಜಾಗೃತಿಯನ್ನು ವಿದ್ಯಾರ್ಥಿಗಳಲ್ಲಿ ಮೂಡಿಸುವ ನಿಟ್ಟಿನಲ್ಲಿ ಆಯೋಜಿಸಿದ ಸಂಶೋಧನಾ ಕಮ್ಮಟ ಅರ್ಥಪೂರ್ಣತೆ ಪಡೆದುಕೊಂಡಿದೆ.

ರಂಗಕರ್ಮಿ ಮಲ್ಲಿಕಾರ್ಜುನ ಸಜ್ಜನ ಕಮ್ಮಟದ ಅನುಭವ ಕುರಿತು ಮಾತನಾಡಿ ನಾಟಕ ಮತ್ತು ಕಲೆಗಳು ಪಠ್ಯೇತರ ಚಟುವಟಿಕೆಗಳಲ್ಲಬದಲಾಗಿ ಸಮಗ್ರ ಶಿಕ್ಷಣ ಅಗತ್ಯ ಅಂಶಗಳಾಗಿದ್ದು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಇಂತಹ ರಾಜ್ಯ ಮಟ್ಟದ ಕಮ್ಮಟ ಎಲ್ಲರಿಗೂ ಮಾದರಿಯಾಗಿದೆ ಎಂದರು.

ಹಂಪಿ ವಿಶ್ವವಿದ್ಯಾಲಯದ ನಾಟಕ ವಿಭಾಗದ ಮುಖ್ಯಸ್ಥರಾದ ಡಾ.ವೀರೇಶ ಬಡಿಗೇರ ಅವರು ಪ್ರಮಾಣ ಪತ್ರ ವಿತರಿಸಿ ಮಾತನಾಡಿ, ತಂತ್ರಜ್ಞಾನ ಜಗತ್ತಿನಲ್ಲಿಂದು ದೂರಸ–ರಿಯುತ್ತಿರುವ ದೇಶಿಯ ಕಲೆಗಳನ್ನು, ನಾಟಕ ಸಾಹಿತ್ಯ ಸಂಸ್ಕೃತಿಯನ್ನು ಪ್ರತಿಯೊಬ್ಬರು ಉಳಿಸಿ ಬೆಳಸಬೇಕಾಗಿದೆ ಹೇಳಿದರು. ರಾಷ್ಟೀಯ ಸಂಶೋಧನಾ ವೇದಿಕೆಯ ಗೌರವಾಧ್ಯಕ್ಷರಾದ ಡಾ.ಸಂಗಮೇಶ ಕಲ್ಯಾಣಿ, ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಜಿ.ಜಿ.ಹಿರೇಮಠ ವೇದಿಕೆ ಮೇಲೆ ಉಪಸ್ಥಿತರಿದ್ದರು.

ಪ್ರೊ.ಪರಸಪ್ಪ ತಳವಾರ ಪ್ರಾರ್ಥನೆ ಮಾಡಿದರು, ಡಾ.ಸುಮಂಗಲಾ ಮೇಟಿ ಸ್ವಾಗತಿಸಿದರು. ಪ್ರೊ.ಸಂಗಮೇಶ ಬ್ಯಾಳಿ ಕಾರ್ಯಕ್ರಮ ನಿರೂಪಿಸಿದರು. ಡಾ.ಚಂದ್ರಶೇಖರ ಕಾಳನ್ನವರ ವಂದಿಸಿದರು.

## ಸರಕಾರಕ್ಕೆ 29. ಲಕ್ಷ ಆದಾಯ ತಂದ ಮಾನ್ವಿ ವಲಯ ಅಬಕಾರಿ ಇನ್ಸ್ ಪೆಕ್ಟರ್ ಅಧಿಕಾರಿ – ಯಮನೂರ್ ಸಾಬ್ ಹೊಸಮನಿ

**ಸಿಹಿ ಕಹಿ ಸುದ್ದಿ,**
**ಮಾನ್ವಿ ಜೂ.03 :** ಸರಕಾರದ ಅಧಿಕಾರಿಗಳು ಸರಿಯಾಗಿ ಡ್ಯೂಟಿ ಮಾಡಲ್ಲ ಎಂದು ಮೂಗು ಮುರಿಯುತ್ತ ಆರೋಪಿಸುವವರೆ ಜಾಸ್ತಿ. ಆದರೆ ಮಾನ್ವಿ ಅಬಕಾರಿ ಇಲಾಖೆಯ ವಲಯ ಇನ್ಸ್ ಪೆಕ್ಟರ್ ಯಮನೂರ್ ಸಾಬ್ ಹೊಸಮನಿ. ಅವರು ಅಕ್ರಮ ಮದ್ಯೆ ದಂಧೆಕೋರರಿಗೆ ಚಳಿ ಬಿಡಿಸುತ್ತ ದಂಡ ಹಾಕುವ ಮೂಲಕ ಪ್ರಾಮಾಣಿಕವಾಗಿ ಕೆಲಸ ಮಾಡಿ ಸರಕಾರಕ್ಕೆ 29. ಲಕ್ಷ ಆದಾಯ ತಂದು ದಕ್ಷ ಅಧಿಕಾರಿ ಯಾಗಿದ್ದಾರೆ.






ರಾಯಚೂರು ಜಿಲ್ಲೆಯ ಮಾನ್ವಿ ಅಬಕಾರಿ ಇಲಾಖೆ ವ್ಯಾಪ್ತಿಯಲ್ಲಿ ಕಳ್ಳಬಟ್ಟಿ ಸಾರಾಯಿ, ಗೂಡಂಗಡಿಗಳಲ್ಲಿ ಅಕ್ರಮ ಮದ್ಯ ಮಾರಾಟ ದಂದ–ೆ ಎಗ್ಗಿಲ್ಲದೆ ನಡೆಯುತ್ತಿರುವುದನ್ನು ಮನಗಂಡು ಅಬಕಾರಿ ಇನ್ಸ್ ಪೆಕ್ಟರ್ ಯಮನೂರ್ ಸಾಬ್ ಹೊಸಮನಿ. ಅವರು ಕೇವಲ ಎರಡು ವರ್ಷದಲ್ಲಿಯೇ ಸರಕಾರಕ್ಕೆ 29. ಲಕ್ಷ ಆದಾಯ ತಂದು 32 ವಾಹನ ಜಪ್ತಿ, 83 ಘೋರ ಪ್ರಕರಣ, 259 ಕಳ್ಳ ಭಟ್ಟಿ ಪ್ರಕರಣ ಬಿಯರ್ ಹಾಗೂ ಲಿಕ್ಕರ್ ಸೇರಿ ಒಟ್ಟು 2382 ಲೀಟರ್ ಮದ್ಯ ವಶಪಡಿಸಿಕೊಂಡು ದಕ್ಷ ಅಧಿಕಾರಿಯಾಗಿ ಸೇವೆ ಮಾಡುತ್ತಿದ್ದಾರೆ.


ಮಾನ್ವಿ ಅಬಕಾರಿ ಇಲಾಖೆ ವ್ಯಾಪ್ತಿಯಲ್ಲಿ ಸನ್ನದುದಾರರು ಷರತ್ತು ಉಲ್ಲಂಘಿಸಿರುವ ದೂರುಗಳು ಹಾಗೂ ಅಕ್ರಮ ಮದ್ಯ ಸಾಗಣೆ ಮಾಡುತ್ತಿರುವ ದೂರುಗಳು ಬಂದರೆ ಸಾಕು ಇನ್ಸ್ ಪೆಕ್ಟರ್ ಹೊಸಮನಿ ಅವರು ಕೂಡಲೇ ಸ್ಪಂದಿಸಿ ಕಾನೂನಾತ್ಮಕವಾಗಿ ಪ್ರಕರಣ ದಾಖಲಿಸಿ ಕ್ರಮ ಜರುಗಿಸುವ ಕೆಲಸ ಮಾಡುತ್ತಿದ್ದಾರೆಂದು ಸ ಂ ಘ ' ಟ ನ ಾ ಕ ಾ ರ ' ರ ' ಅಭಿಪ್ರಾಯವಾಗಿದೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ವೈದ್ಯಕೀಯ ಸುವರ್ಣ ಮಹೋತ್ಸವ
## ಡಾ. ಲಿಂಗಪ್ಪ ಹಾದಿಮನಿ ಸಾರ್ಥಕ ಬದುಕು

**ಬಾದಾಮಿ :** ವೈದ್ಯಕೀಯ ವೃತ್ತಿ ಜೀವನದಲ್ಲಿ ಡಾ.ಲಿಂಗಪ್ಪ ಹಾದಿಮನಿಯವರು ಐವತ್ತು ವರ್ಷ ಅವಿರತವಾಗಿ ಬಡರೋಗಿಗಳಿಗೆ ಚಿಕಿತ್ಸೆ ನೀಡುತ್ತ ಬಡವರ ಪಾಲಿನ ದೇವರಾಗಿದ್ದಾರೆ ಎಂದು ಸಂಸದ ಪಿ.ಸಿ ಗದ್ದಿಗೌಡ್ರ ಹೇಳಿದರು

ಅವರು ತಾಲೂಕಿನ ಚೊಳಚಗುಡ್ಡದಲ್ಲಿ ಡಾ.ಲಿಂಗಪ್ಪ ಹಾದಿಮನಿಯವರ ವೈದ್ಯಕೀಯ ಸುವರ್ಣ ಮಹೋತ್ಸವ, ಗುರುವಂದನಾ ಕಾರ್ಯಕ್ರಮ, ರಕ್ತದಾನ ಶಿಬಿರ, ಉಚಿತ ಆರೋಗ್ಯ ತಪಾಸಣಾ ಕಾರ್ಯಕ್ರಮ ಹಾಗೂ ಹಾದಿಮನಿ ದಂಪತಿಗೆ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು



ವಿಧಾನ ಪರಿಷತ್ತ ಸದಸ್ಯ ಹನುಮಂತ ನಿರಾಣಿ ಮಾತನಾಡಿ ಕಲಿಸಿದವನ್ನು ನೆಪಿಸಿಕೊಂಡು ಸನ್ಮಾನ ಮಾಡುವ ಕೆಲಸ ಶ್ಲಾಘನೀಯ, ಡಾ.ಲಿಂಗಪ್ಪಹಾದಿಮನಿಅವರುಹಣನೋಡಿಲ್ಲ ನಗರ ಪ್ರದೇಶಕ್ಕೆ ಹೋಗದೆ ಗ್ರಾಮೀಣ ಜನರ ಆರೋಗ್ಯ ನೋಡಿ ವೈದ್ಯಕೀಯ ಸೇವೆಯನ್ನು 50 ವರ್ಷಗಳಿಂದ ಮಾಡುತ್ತಾ ಮಕ್ಕಳಿಗೆ ಉನ್ನತ ಶಿಕ್ಷಣ ಕೊಟ್ಟು ಅವರನ್ನೆ ಆಸ್ತಿಯನ್ನಾಗಿ ಮಾಡಿದ್ದು ಹೆಮ್ಮೆಯ ಸಂಗತಿ ಎಂದರು

ಶಾಸಕ ಭೀಮಸೇನ ಚಿಮ್ಮನಕಟ್ಟಿ, ಬಿಜೆಪಿ ಜಿಲ್ಲಾಧ್ಯಕ್ಷ ಎಸ್.ಟಿ ಪಾಟೀಲ ಮಾತನಾಡಿ ಡಾ.ಲಿಂಗಪ್ಪ ಹಾದಿಮನಿ ಅವರು ಎಷ್ಟೆ ಶ್ರೀಮಂತರಾದರೂ ಸರಳ ವ್ಯಕ್ತಿತ್ವ, ಉತ್ತಮ ಜೀವನ ನಡಿಸುತ್ತಾ ಗ್ರಾಮೀಣರ ಆರೋಗ್ಯ ಕಾಳಜಿ ಮಾಡುವ ಸೇವೆ ಮಾಡುತ್ತಿರುವುದು ಪ್ರಶಂಸನೀಯ ಎಂದರು

ಈ ಸಂದರ್ಭದಲ್ಲಿ ರಕ್ತದಾನ ಶಿಬಿರ, ಉಚಿತ ಆರೋಗ್ಯತಪಾಸಣೆಶಿಬಿರಜರುಗಿತು,ನೂರಾರು ರೋಗಿಗಳು ಚಿಕಿತ್ಸೆ ಪಡೆದುಕೊಂಡರು

ಅಲ್ಲಮಪ್ರಭು ಶ್ರೀ, ಒಪ್ಪತ್ತೇಶ್ವರ ಶ್ರೀ, ಶಿವಪೂಜಾ ಶ್ರೀ ದಿವ್ಯ ಸಾನಿಧ್ಯವಹಿಸಿ ಆಶೀರ್ವಚನ ನೀಡಿದರು, ಅಧ್ಯಕ್ಷತೆ ವಹಿಸಿದ್ದ ಗುರುಪಾದಪ್ಪ ವಾಲಿ ಮಾತನಾಡಿದರು, ಕಾರ್ಯಕ್ರಮದಲ್ಲಿ ಶಾಸಕ ಎಂ.ಕೆ ಪಟ್ಟಣಶೆಟ್ಟಿ, ಜೆಡಿಎಸ್ ಜಿಲ್ಲಾಧ್ಯಕ್ಷ ಹನಮಂತ ಮಾವಿನಮರದ, ಶರಣಪ್ಪ(ವೀರನಗೌಡ) ಪಾಟೀಲ, ಮಹೇಶ ಹೊಸಗೌಡ್ರ, ಕುಮಾರಗೌಡ ಜನಾಲಿ, ಡಾ. ಎನ್.ಡಿ ದೊಡ್ಡನಿಂಗಪ್ಪನವರ,

ಬಿ.ಸಿ ಬೆಳವಟಗಿ, ಬಸವರಾಜ ಬೆಳವಟಗಿ, ಎಂ.ಡಿ ಎಲಿಗಾರ, ಎಂ.ಬಿ ಹಂಗರಗಿ, ಬಸವರಾಜ ಪಾಟೀಲ, ಪಿ.ಆರ್ ಗೌಡರ, ರುದ್ರಗೌಡ ಪಾಟೀಲ, ವೀರಣ್ಣ ಸಾತನ್ನವರ, ಕುಬೇರಗೌಡ ಪಾಟೀಲ, ರಮೇಶ ಹಾದಿಮನಿ, ಮಲ್ಲಯ್ಯ ಮುಪ್ಪಿನವರ ಸೇರಿದಂತೆ ನೂರಾರು ಮುಖಂಡರು, ಹಾದಮನಿ ಕುಟುಂಬಸ್ಥರು, ಯಲಿಗಾರ ಕುಟಯಂಬಸ್ಥರು ಗ್ರಾಮಸ್ಥರು ಹಾಜರಿದ್ದರು.

## ಚಂದ್ರಕಾಂತ ಹಿರೇಮಠ ನಿಧನ



**ಜಮಖಂಡಿ :** ತಾಲೂಕಿನ ಕಡಕೋಳ ಗ್ರಾಮದ ಜಂಗಮ ಸಮಾಜದ ನಿವಾಸಿ ನ್ಯಾಯವಾದಿ ಚಂದ್ರಕಾಂತ ಅಪ್ಪಯ್ಯ ಹಿರೇಮಠ ತಮ್ಮ 33 ನೆಯ ವಯಸ್ಸಿನಲ್ಲಿ ಮೇ ತಿಂಗಳ 29 ರಂದು ಬೆಳಗಿನ ಜಾವ ನಿಧನರಾದರು.

ಮೃತರು ತಮ್ಮ ಹಿಂದೆ ತಾಯಿ, ಪತ್ನಿ, ಇಬ್ಬರು ಸಹೋದರರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

## ಬಸವೇಶ್ವರ ಬಾಲಕಿಯರ ಪ್ರೌಢ ಶಾಲೆಯಲ್ಲಿ ಶಾಲಾ ಪ್ರಾರಂಭೋತ್ಸವ



**ಬಾಗಲಕೋಟೆ :** ನಗರದ ಪ್ರತಿಷ್ಠಿತ ಬಿ.ವಿ.ವಿ.ಸಂಘದ ಬಸವೇಶ್ವರ ಬಾಲಕಿಯರ ಪ್ರೌಢಶಾಲೆಯಲ್ಲಿ ಗುರುವಾರ 2025–26 ನೇ ಸಾಲಿನ ಶಾಲಾ ಪ್ರಾರಂಭೋತ್ಸವದ ನಿಮಿತ್ಯ ಸರಸ್ವತಿ ಪೂಜೆ ಸಲ್ಲಿಸಿ ವಿದ್ಯಾರ್ಥಿಗಳಿಗೆ ಗುಲಾಬಿ ಹೂ ನೀಡಿ, ಸಿಹಿ ಹಂಚುವ ಮೂಲಕ ಶಾಲಾ ಪ್ರಾರಂಭೋತ್ಸವಕ್ಕೆ ಚಾಲನೆ ನೀಡಲಾಯಿತು.

ಈ ಸಂದರ್ಭದಲ್ಲಿ ಪದನಿಮಿತ್ಯ ಕಾರ್ಯದರ್ಶಿ ಹಾಗೂ ಪ್ರಾಚಾರ್ಯ ಕೆ.ಎಚ್.ಹೊಸೂರ, ಅನಂತ ಓಂಕಾರ, ಮುಖ್ಯೋಪಾಧ್ಯಯರಾದ ದೇವಾನಂದ ಶಿಕ್ಕೇರಿ ಹಾಗೂ ಶಿಕ್ಷಕ ವೃಂದ ಸಿಬ್ಬಂದಿ ಮತ್ತು ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

# ದನಕನದೊಡ್ಡಿ ಕೆರೆಯ ಹೂಳೆತ್ತುವ ಸ್ಥಳದಲ್ಲಿ ಕೂಲಿಕಾರರಿಗೆ ಕಾನೂನು ಅರಿವು-ನೆರವು

## ಅಸಂಘಟಿತ ವರ್ಗದವರು ಸರ್ಕಾರಿ ಸೌಲಭ್ಯ ಪಡೆಯಿರಿ: ನ್ಯಾ. ಮಹಾಂತೇಶ್ ದರಗದ



**ಕೊಪ್ಪಳ :** ಅಸಂಘಟಿತ ವರ್ಗಗಳಿಗೆ ಸರ್ಕಾರದಿಂದ ಅನೇಕ ಸೌಲಭ್ಯಗಳಿದ್ದು, ಅವುಗಳನ್ನು ಪಡೆಯಲು ಮುಂದಾಗುವಂತೆ ಕೊಪ್ಪಳದ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮಹಾಂತೇಶ್ ಎಸ್. ದರಗದ ಹೇಳಿದರು.

ಅವರು ಬುಧವಾರ ಕೊಪ್ಪಳ ತಾಲ್ಲೂಕಿನ ಕಲ್ಲತಾವರಗೇರಾ ಗ್ರಾಮ ಪಂಚಾಯತಿ ವ್ಯಾಪ್ತಿಯ ದನಕನದೊಡ್ಡಿ ಗ್ರಾಮದ ಕೆರೆಯ ಕಾಮಗಾರಿ ಸ್ಥಳದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ತಾಲೂಕ ಪಂಚಾಯತ ಹಾಗೂ ಕಲ್ಲತಾವರಗೇರಾ ಗ್ರಾಮ ಪಂಚಾಯತಿಯಿಂದ ಆಯೋಜಿಸಿದ್ದ ಅಸಂಘಟಿತ ವರ್ಗಗಳಿಗೆ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ದೇಶದ ಆರ್ಥಿಕತೆ ದುಡಿಯುವ ವರ್ಗಗಳ ಮೇಲೆ ನಿಂತಿದೆ. ಅಸಂಘಟಿತ ವರ್ಗಗಳಿಗೆ ಸಾಕಷ್ಟು ದುಡಿಮೆ ಇದ್ದಲ್ಲಿ ಉತ್ತಮವಾಗಿ ಕುಟುಂಬ ನಿರ್ವಹಣೆಗೆ ಸಾಧ್ಯವಾಗುತ್ತದೆ. ದೇಶ ಅಭಿವೃದ್ಧಿಯತ್ತ ಸಾಗಿದರೆ ಅದರಲ್ಲಿ ಅಸಂಘಟಿತ ವರ್ಗಗಳ ಪಾತ್ರವು ಬಹು ಮುಖ್ಯವಾಗಿರುತ್ತದೆ. ಅಸಂಘಟಿ-ತ ವರ್ಗದವರಿಗೆ ಸರ್ಕಾರದಿಂದ ಅನೇಕ ಸೌಲಭ್ಯಗಳನ್ನು ಕಲ್ಪಿಸಲಾಗಿದ್ದು, ಇಲಾಖೆಯಿಂದ ದೊರೆಯುವ ಸೌಲಭ್ಯಗಳ ಕುರಿತು ಮಾಹಿತಿ ಪಡೆಯುವಂತೆ ಕರೆ ನೀಡಿದರು. ಅಸಂಘಟಿತ ವರ್ಗದವರಿಗೆ ಕಾನೂನಿನ ಅರಿವು ಮತ್ತು ನೆರವು ನೀಡುವ ಉದ್ದೇಶದಿಂದ ಈ ದಿನ ಕಾರ್ಯಕ್ರಮ ಆಯೋಜಿಸಲಾಗಿದೆ. ದುಡಿಮೆ ದೇವರು ಎನ್ನುವ ಕಲ್ಪನೆ ಹೊಂದಿರುವ ಶ್ರಮಿಕ ವರ್ಗ, ಕೆಲಸಕ್ಕೆ ಸೀಮಿತವಾಗಿರದೇ ಕೆಲಸದ ಜೊತೆಗೆ ಸರ್ಕಾರಿ ಸೌಲಭ್ಯಗಳನ್ನು ಪಡೆಯುವದು ಅವರ ಹಕ್ಕಾಗಿದೆ ಎಂದರು.

ಕೊಪ್ಪಳ ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ದುಂಡಪ್ಪ ತುರಾದಿ ಅವರು ಮಾತನಾಡಿ, ಕೂಲಿಕಾರರು ಸಾಮುದಾಯಿಕ ಕಾಮಗಾ-ರಿಯಲ್ಲಿ ಕೆಲಸಕ್ಕೆ ಹಾಜರಾಗುವದರ ಜೊತೆಗೆ ವೈಯಕ್ತಿಕ ಕಾಮಗಾರಿಗಳಾದ ದನದಶೆಡ್, ಮೆಕೆಶೆಡ್, ಕೋಳಿಶೆಡ್, ಹಂದಿಶೆಡ್ ಮತ್ತು ತೋಟಗಾರಿಕೆ, ರೇಷ್ಮೆ ಕಾಮಗಾ-ರಿಗಳನ್ನು ಅನುಷ್ಠಾನಿಸಲು ಅವಕಾಶ ಇರುವದರಿಂದ ಅವುಗಳಿಗೆ ಕೂಡಾ ಹೆಚ್ಚು ಆದ್ಯತೆ ನೀಡಿ ಅನುಷ್ಠಾನಿಸಿದಲ್ಲಿ ಆರ್ಥಿಕ ಸದೃಡರಾಗಬಹುದೆಂದರು.

ಕಾರ್ಮಿಕ ಇಲಾಖೆಯ ನಿರೀಕ್ಷಕಿ ಮಂಜುಳಾ ಅವರು ಮಾತನಾಡಿ, ಎಲ್ಲಾ ನರೇಗಾ ಕೂಲಿಕಾರರು ಕಟ್ಟಡ ಕಾರ್ಮಿಕರಾಗಿರುವದಿಲ್ಲ. ಗೌಂಡಿ ಕೆಲಸ, ಟೇಲರಿಂಗ್ ಎಲೆಕ್ಟ್ರಿಯಷನ್ ಇತ್ಯಾದಿ ಒಟ್ಟು 91 ವರ್ಗದವ ಕೆಲಸ ನಿರ್ವಹಿಸುವ ಎಲ್ಲರೂ ಕಾರ್ಮಿಕ ಇಲಾಖೆಯಲ್ಲಿ ನೊಂದಣಿ ಮಾಡಿಕೊಂಡಲ್ಲಿ ಅವರಿಗೆ ಅಪಘಾತವಾಗಿ ಶಾಶ್ವತ ಅಂಗವಿಕಲತೆ ಹೊಂದಿದಲ್ಲಿ ಮತ್ತು ಮರಣ ಹೊಂದಿದರೆ ಸರ್ಕಾರದಿಂದ ಪರಿಹಾರ ಧನ ಒದಗಿಸಲು ಅವಕಾಶ ಇರುತ್ತದೆ ಎಂದರು.

ತಾಲೂಕ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಶರಣಪ್ಪ ಅವರು ಮಾತನಾಡಿ ಸಮಾಜ ಕಲ್ಯಾಣ ಇಲಾಖೆಯಿಂದ ಎಸ್.ಸಿ ಮತ್ತು ಎಸ್.ಟಿ ಕುಟುಂಬಗಳ ಮಕ್ಕಳಿಗೆ ವಿದ್ಯಾರ್ಥಿ ವೇತನ, ವಸತಿ ನಿಲಯ ಸೌಲಭ್ಯ ಮತ್ತು ಎಸ್‌ಸಿಪಿ ಮತ್ತು ಟಿಎಸ್‌ಪಿ ಯೋಜನೆಯಡಿ ಮೂಲಭೂತ ಸೌಕರ್ಯ ಒದಗಿಸಲು ಅವಕಾಶ ಇರುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಗಂಗಪ್ಪ ನಾಯಕ, ಪಂಚಾಯತ್ ರಾಜ್ ಸಹಾಯಕ ನಿರ್ದೇಶಕ ಮಹೇಶ್, ಗ್ರಾ.ಪಂ ಸದಸ್ಯರಾದ ರವಿಕುಮಾರ ಒಂಟಿಗಾರ, ಪಾರಮ್ಮ ಕೊಳ್ಳಿ, ಶಾಂತಮ್ಮ ಬಸವರಾಜ ಪಂಚಾಯತ ಅಭಿವೃದ್ಧಿ ಅಧಿಕಾರಿ ಯಮನೂರಪ್ಪ ಕಬ್ಬಣನವರ, ತಾಲೂಕ ಐಇಸಿ ಸಂಯೋಜಕ ದೇವರಾಜ ಪತ್ತಾರ, ಸಮುದಾಯ ಆರೋಗ್ಯ ಸುರಕ್ಷಾಧಿಕಾರಿ ಫಾಮಿದಾ, ಶಬ್ಬೀರ್, ತಾಂತ್ರಿಕ ಸಹಾಯಕ ಮಂಜುನಾಥ ಮಾದಾಪುರ ಮತ್ತು ಗ್ರಾ.ಪಂ ಕರವಸೂಲಿಗಾರ ನಾಗರಾಜ ಸೇರಿಂದತೆ ಇತರೆ ಸಿಬ್ಬಂದಿಗಳು ಹಾಜರಿದ್ದರು.

ಸಿವಿಲ್ ನ್ಯಾಯಾಧೀಶರು ಸಸಿಗಳನ್ನು ನೆಟ್ಟು ನೀರು ಉಣಿಸಿದರು. ಕಾರ್ಯಕ್ರಮದಲ್ಲಿ ಹಾಜರಿದ್ದ ಎಲ್ಲಾ ನರೇಗಾ ಕೂಲಿಕಾರ-ರಿಗೆ ಆರೋಗ್ಯ ಇಲಾಖೆ ಸಿಬ್ಬಂದಿಗಳಿಂದ ಆರೋಗ್ಯ ತಪಾಸಣೆ ಜರುಗಿಸಲಾಗಿತು.

# ಬೇಸಿಗೆ ಶಿಬಿರ ಸಮಾರೋಪ ಸಮಾರಂಭ

## ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆ ಮಕ್ಕಳ ಸಮಗ್ರ ಕಲಿಕೆಗೆ ಸ್ಫೂರ್ತಿ: ಗಂಗಪ್ಪ




**ಕೊಪ್ಪಳ :** ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳನ್ನು ಕಲಿಸಿದಾಗ ಮಾತ್ರ ಅದು ಮಕ್ಕಳ ಸಮಗ್ರವಾದ ಕಲಿಕೆಯಾಗುತ್ತದೆ ಎಂದು ಕೊಪ್ಪಳ ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರೂಪಣಾಧಿಕಾರಿ ಗಂಗಪ್ಪ ಹೇಳಿದರು.

ಬೆಂಗಳೂರು ರಾಜ್ಯ ಬಾಲ ಭವನ ಸೊಸೈಟಿ, ಜಿಲ್ಲಾ ಪಂಚಾಯತ್ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಕೊಪ್ಪಳ ಜಿಲ್ಲಾ ಬಾಲ ಭವನ ಸಮಿತಿ ಇವರ ಸಹಯೋಗದಲ್ಲಿ ಸೋಮವಾರ ಕೊಪ್ಪಳದ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ನಡೆದ 2025-26ನೇ ಸಾಲಿನ ಬೇಸಿಗೆ ಶಿಬಿರ ಸಮಾರೋಪ ಸಮಾರಂಭ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳಿಗೆ 15 ದಿನಗಳ ಕಾಲ ಚಿತ್ರಕಲೆ, ಜೇಡಿಮಣ್ಣಿನ ಕಲೆ, ಕರಕುಶಲ, ಕರಾಟೆ, ಯೋಗ, ಸಮೂಹ ಸಂಗೀತ ಮತ್ತು ಸಮೂಹ ನೃತ್ಯ ಇಂತಹ ಹಲವಾರು ವಿವಿಧ ಚಟುವಟಿಕೆಗಳನ್ನು ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ ನೀಡಿದ್ದು, ಇಂದು ಆ ಎಲ್ಲಾ ಕಲೆಗಳ ಪ್ರದರ್ಶನ ದಿನವಾಗಿದೆ. ನಂತರ ಮಕ್ಕಳು 15 ದಿನಗಳಲ್ಲಿ ಉತ್ತಮ ರೀತಿಯಲ್ಲಿ ಕಲಿತುಕೊಂಡಿರುವುದು ನಮ್ಮೆಲ್ಲರಿಗೂ ಸಂತೋಷದ ವಿಷಯವೆಂದು ತಿಳಿಸಿದರು.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಮಹಾಂತಸ್ವಾಮಿ ಪೂಜಾರ ಅವರು ಮಕ್ಕಳಿಗೆ ಇಂತಹ ಕಾರ್ಯಕ್ರಮಗಳು ಅವಶ್ಯಕವಾಗಿವೆ, ಮಕ್ಕಳು ಇಂತಹ ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಹೇಳಿದರು.

ಕೊಪ್ಪಳ ಯುನಿಸೆಫ್ ಸಂಯೋಜಕರಾದ ಹರೀಶ ಜೋಗಿ ಮಾತನಾಡಿ, ಮಕ್ಕಳಿಗೆ ಈ ಬೇಸಿಗೆ ಶಿಬಿರದಲ್ಲಿ ಕಲಿಸಿದ ಸಂಪನ್ಮೂಲ ವ್ಯಕ್ತಿಗಳಿಗೆ ಹಾಗೂ ತಂದೆ ತಾಯಿಗಳಿಗೆ ಚಪ್ಪಾಳೆ ಮೂಲಕ ಅಭಿನಂದನೆ ಸಲ್ಲಿಸಲು ತಿಳಿಸಿದರು. ಹಾಗೂ ಈ ಕಾರ್ಯಕ್ರಮವನ್ನು ಉತ್ತಮ ರೀತಿಯಲ್ಲಿ ಆಯೋಜನೆ ಮಾಡಿ ಮಕ್ಕಳಿಗೆ ಉತ್ತಮ ಅವಕಾಶ ಕಲ್ಪಿಸಿ ಕೊಟ್ಟಿರುವ ಬೆಂಗಳೂರು ರಾಜ್ಯ ಬಾಲ ಭವನ ಸೊಸೈಟಿಗೆ ಹಾಗೂ ಇಲಾಖೆಯ ಸಿಬ್ಬಂದಿಗಳಿಗೆ ಧನ್ಯವಾದಗಳನ್ನ ಹೇಳಿದರು.

ಕಾರ್ಯಕ್ರಮದಲ್ಲಿ ಕೊಪ್ಪಳ ಜಿಲ್ಲೆಯ ಯೋಜನೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿ ರೋಹಿಣಿ ಕೊಟಗಾರ, ಗಂಗಾವತಿಯ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಜಯಶ್ರೀ ಆರ್, ಕೊಪ್ಪಳ ಜಿಲ್ಲೆಯ ವೃತ್ತಿ ಶಿಕ್ಷಣ ಶಿಕ್ಷಣ ಇಲಾಖೆಯ ವಿಷಯ ಪರೀಕ್ಷಕರಾದ ವೀಣಾ ಮತ್ತು ಮಕ್ಕಳ ಕಲ್ಯಾಣ ಸಮಿತಿ ಸದಸ್ಯರಾದ ದಿವ್ಯಜೋತಿ, ಮಂಗಳ, ಯಮನೂರಪ್ಪ ಹಾಗೂ ಸಂಪನ್ಮೂಲ ವ್ಯಕ್ತಿಗಳು, ವಿವಿಧ ಶಾಲೆಯ ಮಕ್ಕಳು, ಸರಕಾರಿ ಬಾಲಕರ ಬಾಲಮಂದಿರ, ಸರಕಾರಿ ಬಾಲಕಿಯರ ಬಾಲ ಮಂದಿರದ ಮಕ್ಕಳು ಪಾಲಕರು ಪೋಷಕರು ಸೇರಿದಂತೆ ಇಲಾಖೆಯ ಸಿಬ್ಬಂದಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತ-ರಿದ್ದರು.

ಸಿದ್ದಪ್ಪ ಕುರಿ ಕಾರ್ಯಕ್ರಮ ನಿರೂಪಿಸಿದರು. ಜಿಲ್ಲಾ ಬಾಲ ಭವನ ಸಂಯೋಜಕ ಮೆಹಬೂಬಸಾಬ ಇಲಾಹಿ ಸ್ವಾಗತಿಸಿದರು. ಪ್ರಮೋದ್ ಕುಮಾರ ವಂದಿಸಿದರು.

# ಪ್ರಧಾನ ಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮ: ಪ್ರಗತಿ ಪರಿಶೀಲನಾ ಸಭೆ

## ನಿಗದಿತ ಗುರಿಯಂತೆ ಅರ್ಹ ಅಲ್ಪಸಂಖ್ಯಾತರ ಫಲಾನುಭವಿಗಳಿಗೆ ಸೌಲಭ್ಯ ತಲುಪಿಸಿ-ಅಪರ ಜಿಲ್ಲಾಧಿಕಾರಿ ಸಿದ್ದರಾಮೇಶ್ವರ




**ಕೊಪ್ಪಳ :** ಅಲ್ಪಸಂಖ್ಯಾತ ಸಮುದಾಯಗಳಾದ ಮುಸ್ಲಿಂ, ಜೈನ್, ಕ್ರಿಶ್ಚಿಯನ್, ಸಿಖ್ ಪಾರ್ಸಿ ಬೌದ್ಧ ಸಮುದಾಯಗಳಗಳಿಗೆ ವಿವಿಧ ಯೋಜನೆಗಳಡಿಯಲ್ಲಿ ನಿಗದಿಪಡಿಸಿದ ಗುರಿಗಳಂತೆ ಅರ್ಹ ಫಲಾನುಭವಿಗಳಿಗೆ ಸೌಲಭ್ಯ ತಲುಪಿಸುವಂತೆ ಕೊಪ್ಪಳ ಅಪರ ಜಿಲ್ಲಾಧಿಕಾರಿ ಸಿದ್ದರಾಮೇಶ್ವರ ಹೇಳಿದರು.

ಅವರು ಸೋಮವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಹಮ್ಮಿಕೊಂಡಿದ್ದ ಪ್ರಧಾನ ಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು. ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಅರಿವು ಯೋಜನೆ ಹಾಗೂ ಆರ್ಥಿಕವಾಗಿ ಸಬಲಿಕರಣಗೊಳಿಸಲು ವಿವಿಧ ಯೋಜನೆಗಳಡಿ ಸಾಲ ಸೌಲಭ್ಯ ಒದಗಿಸವ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ವಿದ್ಯಾರ್ಥಿ ವೇತನ, ಉಚಿತ ಪರೀಕ್ಷಾ ಪೂರ್ವ ತರಬೇತಿಗಳನ್ನು ನೀಡಲಾಗುತ್ತಿದ್ದು, ಇದರ ಸದುಪಯೋಗ ಅಲ್ಪಸಂಖ್ಯಾತರ ಸಮುದಾಯದ ಅರ್ಹ ಫಲಾನುಭವಿಗಳಿಗೆ ಸಿಗುವಂತಾಗಲಿ. ಇದರ ಜೊತೆಗೆ ವಿವಿಧ ಇಲಾಖೆಗಳ ಮೂಲಕವು ಅಲ್ಪಸಂಖ್ಯಾತರಿಗಾಗಿಯೇ ಮೀಸಲಿಟ್ಟ ಅನುದಾನವನ್ನು ಸಹ ಅರ್ಹರಿಗೆ ತಲುಪಿಸಲು ಆಯಾ ಇಲಾಖೆಗಳ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳಬೇಕು. ನಿವೇಶನ, ಮನೆಗಳ ಹಂಚಿಕೆ, ಸ್ವಯಂ ಉದ್ಯೋಗ ಯೋಜನೆ, ಗಂಗಾ ಕಲ್ಯಾಣ ಹಾಗೂ ವಿವಿಧ ಇಲಾಖೆಯ ಯೋಜನೆಗಳ ಬಗ್ಗೆ ಅರಿವು ಮೂಡಿಸಲು ಪ್ರಚಾರ ಕಾರ್ಯಕ್ರಮ ಕೈಗೊಂಡು ಅರ್ಹ ಫಲಾನುಭವಿಗಳನ್ನು ಗುರುತಿಸಬೇಕು ಎಂದು ಅಪರ ಜಿಲ್ಲಾಧಿಕಾರಿಗಳು ಸಂಬಂಧಿಸಿದ ಅಧಿಕಾ-ರಿಗಳಿಗೆ ಸೂಚನೆ ನೀಡಿದರು.

ಈ ಸಭೆಯಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಅಜ್ಮೀರ್ ಅಲಿ, ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿಯ ನಾಮ ನಿರ್ದೇಶಿತ ಸದಸ್ಯರಾದ ಮೊಹಮ್ಮದ ನಜೀರುದ್ದಿನ, ಮೆಹಬೂಬ್ ಪಾಷಾ ಮಾನ್ವಿ, ಪ್ರಶಾಂತ ಎಸ್. ದೇಸಾಯಿ, ಎಂ.ಮದರ್ ವಲಿಸಾಬ್ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ತಾಲ್ಲೂಕು ವಿಸ್ತರಣಾಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.

# ಯಲಬುರ್ಗಾ ಪ.ಪಂ: ಐ.ಇ.ಸಿ ಚಟುವಟಿಕೆ ಕೈಗೊಳ್ಳಲು ಆಸಕ್ತರಿಂದ ಅರ್ಜಿ ಆಹ್ವಾನ

**ಕೊಪ್ಪಳ :** ಯಲಬುರ್ಗಾ ಪಟ್ಟಣ ಪಂಚಾಯತ್ ಸ್ಥಳೀಯ ಸಂಸ್ಥೆಗಳಲ್ಲಿ ಸ್ವಚ್ಛಭಾರತ್ ಮಿಷನ್(ನ)-2.0 ಗೆ ಸಂಬಂಧಿಸಿದ ಐ.ಇ.ಸಿ ಚಟುವಟಿಕೆಗಳನ್ನು ಕೈಗೊಳ್ಳಲು ಸ್ವಸಹಾಯ ಗುಂಪುಗಳ ಸದಸ್ಯರ ನೇಮಕಾತಿಗಾಗಿ ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಯಲಬುರ್ಗಾ ಪ.ಪಂ.ಯಲ್ಲಿ 3 ವರ್ಷಗಳ ಜೊತೆಗೆ ಪೂರ್ಣಾವಧಿಗೆ ಐ.ಇ.ಸಿ ಚಟುವಟಿಕೆಗಳನ್ನು ಕೈಗೊಳ್ಳಲು ತಮ್ಮ ಆಸಕ್ತಿಯನ್ನು ವ್ಯಕ್ತಪಡಿಸಲು ನಲ್ಮ್-ಡೇ ಅಡಿಯಲ್ಲಿ ನೋಂದಾಯಿಸಿದ ಸ್ವಸಹಾಯ ಗುಂಪಿನ ಸದಸ್ಯರು ಅರ್ಜಿ ಸಲ್ಲಿಸಬಹುದು. ಆಯ್ಕೆ ಪ್ರಕ್ರಿಯೆ ಹಾಗೂ ಗೌರವಧನಕ್ಕೆ ಸಂಬಂಧಿಸಿದ ವಿವರಗಳನ್ನು ಪಟ್ಟಣ ಪಂಚಾಯತಿ ಕಾರ್ಯಾಲಯದಲ್ಲಿ ಪಡೆಯಬಹುದು. ಪಟ್ಟಣ ಪಂಚಾಯತಿ ಕಾರ್ಯಾಲಯದಲ್ಲಿ ಲಭ್ಯವಿರುವ ನಿಗದಿತ ಅರ್ಜಿ ನಮೂನೆಯಲ್ಲಿ ವಿವರಗಳನ್ನು ಭರ್ತಿಮಾಡಿ ಗುರುತಿನ ಪುರಾವೆ, ವಿಳಾಸದ ಪುರಾವೆ, ಅರ್ಹತಾ ಪಟ್ಟಿಯಲ್ಲಿ ನೋಂದಾಯಿಸಿಕೊಂಡಿರುವುದಕ್ಕೆ (ಎಂಪ್ಯಾನಲ್) ದಾಖಲೆಗಳು, ಶೈಕ್ಷಣಿಕ ಅರ್ಹತೆ, ನಲ್ಮ್-ಡೇಯ ಹಿಂಬರಹದ ನಮೂನೆಯೊಂದಿಗೆ ಮೇ 30ರ ಸಂಜೆ 5 ಗಂಟೆಯ ಒಳಗಾಗಿ ಕಾರ್ಯಾಲಯಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ. ಅಥವಾ ಪಟ್ಟಣ ಪಂಚಾಯತಿಯ ಅಧಿಕೃತ ಇ-ಮೇಲ್ ವಿಳಾಸ itstaff ulb yelburga@yahoo.com ಕ್ಕೆ ಅರ್ಜಿಯನ್ನು ಕಳುಹಿಸಬಹುದು. ಆಯ್ಕೆಯಾದ ಅಭ್ಯರ್ಥಿಗಳಿಗೆ ಈ ವಿಷಯದ ಕುರಿತು ಅವರ ತಿಳುವಳಿಕೆಯನ್ನು ನಿರ್ಣಯಿಸಲು ಸಂದರ್ಶನಕ್ಕೆ ಕರೆಯಲಾಗುವುದು ಎಂದು ಪ.ಪಂ. ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿದ್ಯಾರ್ಜನೆಯೇ ವಿದ್ಯಾರ್ಥಿ ಜೀವನದ ಮುಖ್ಯ ಗುರಿ: ರವಿ ಹತ್ತಳ್ಳಿ

**ವಿಜಯಪುರ:** ವಿದ್ಯಾರ್ಥಿಗಳು ಶಿಕ್ಷಣಕ್ಕೆ ಮೊದಲಾದ್ಯತೆ ನೀಡಿ, ಜೀವನದಲ್ಲಿ ನಿರ್ದಿಷ್ಟ ಗುರಿ ಹೊಂದುವ ಜೊತೆಗೆ ಗುರುಭಕ್ತಿ, ಶ್ರದ್ಧೆ, ಆಸಕ್ತಿ, ಸ್ವಯಂ ಶಿಸ್ತಿನ ಗುಣಗಳನ್ನು ರೂಢಿಸಿಕೊಂಡು ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳಬೇಕು ಎಂದು ಹುಬ್ಬಳ್ಳಿ ಧಾರವಾಡ ತೆ-ರಿಗೆ ಇಲಾಖೆಯ ಜಂಟಿ ನಿರ್ದೇಶಕ ರವಿ ಹತ್ತಳ್ಳಿ ಹೇಳಿದರು.

ರವಿವಾರ ನಗರದ ಷಣ್ಮುಖಾರೂಢ ಮಠದಲ್ಲಿ ಅಭಿನವಶ್ರೀ ಬೇಸಿಗೆ ವಿಶೇಷ ತರಬೇತಿ ಶಿಬಿರದ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿಗಳಲ್ಲಿ ಶಿಸ್ತು ಮತ್ತು ಸಮಯಪ್ರಜ್ಞೆ ಬಹಳ ಮುಖ್ಯ. ನಿರಂತರ ಅಧ್ಯಯನದಿಂದ ಗುರಿ ತಲುಪಲು ಸಾಧ್ಯ. ಯಾವುದೇ ಗುರಿ ತಲುಪಬೇಕಾದರೂ ಶ್ರದ್ಧೆ, ಸಂಯಮ ಹಾಗೂ ಕಠಿಣ ಪರಿಶ್ರಮ ಅತ್ಯಗತ್ಯ ಎಂದು ಹೇಳಿದರು.

ಶಿಕ್ಷಕ ಸಾಹಿತಿ ಸಂತೋಷ ಬಂಡೆ ಮಾತನಾಡಿ,

ವಿದ್ಯಾರ್ಜನೆಯೇ ವಿದ್ಯಾರ್ಥಿ ಜೀವನದ ಮುಖ್ಯ ಗುರಿ. ಮಕ್ಕಳಲ್ಲಿ ಶಿಸ್ತು, ಸಂಸ್ಕಾರ ಮುಖ್ಯ. ಮಕ್ಕಳಲ್ಲಿ ಸಕಾರಾತ್ಮಕ ಯೋಚನೆ ಜಾಗೃತವಾಗಬೇಕು. ಸದೃಢ ಸ್ವಸ್ಥ ಸಮಾಜ ನಿರ್ಮಾಣದಲ್ಲಿ ಶಿಕ್ಷಣದ ಪಾತ್ರ ಬಹು ಮುಖ್ಯ ಎಂದು ಹೇಳಿದರು.

ಸಂಸ್ಥೆಯ ಅಧ್ಯಕ್ಷ ಅಶೋಕ ಬಿರಾದಾರ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಕ್ಕಳು ಕುಟುಂಬ, ಸಮಾಜ, ದೇಶದ ಆಸ್ತಿಯಾಗುವಂತೆ ಪಾಲಕರು, ಶಿಕ್ಷಕರು ಶ್ರಮಿಸಬೇಕು. ವಿದ್ಯಾರ್ಥಿಗಳು ವಿದ್ಯೆಯ ಜೊತೆಗೆ ನಯ ವಿನಯ, ಸಂಸ್ಕಾರಗಳನ್ನು ಕಲಿತುಕೊಂಡರೆ ಅದುವೇ ಭೂಷಣವಾಗುತ್ತದೆ' ಎಂದು ಹೇಳಿದರು.

ವಿಜಯಪುರದ ಡಿ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರಾದ ಮಲ್ಲನಗೌಡ ಬಿರಾದಾರ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿದರು. ಶಿವಾನಂದ ಹಿರೇಮಠ ಸಾನಿಧ್ಯ ವಹಿಸಿದ್ದರು. ಬಿ ಎನ್ ಗಸ್ತಿ, ರಮೇಶ ವಿಶ್ವಕರ್ಮ, ಶರತ, ಸಿದ್ದನಗೌಡ ಬಿರಾದಾರ,

ಜಕರಾಯ ಪೂಜಾರಿ, ಮಹಾದೇವ, ಸಂತೋಷ ಇಂಗಳಗಿ, ಬಿ ಎಸ್ ವಾಡೇದ, ಎಚ್ ಸಿ ಪಾಟೀಲ, ಎಸ್ ಕೆ ಉಪ್ಪಾರ, ಎಸ್ ಬಿ ಗುಲಗಂಜಿ, ರೂಪಾ ಬಿರಾದಾರ, ಗೌಡಪ್ಪ ಬಿರಾದಾರ,

ಈಶ್ವರ ಹಡಗಿನಾಳ ಸೇರಿದಂತೆ ಸಂಸ್ಥೆಯ ಶಿಕ್ಷಕ ಸಿಬ್ಬಂದಿ ವರ್ಗ, ಪಾಲಕರು, ತಾಯಂದಿರು, ಮಕ್ಕಳು ಭಾಗವಹಿಸಿದ್ದರು.

# ಮುಂಗಾರು ಮಳೆಯಲ್ಲಿಯೇ (ಅ)ಪರಿಚಿತ ಓದುಗರು ವಿಜಯಪುರದ 6ನೇ ಭೇಟಿ ಯಶಸ್ವಿ



**ವಿಜಯಪುರ :** ವಿಜಯಪುರದ (ಅ)ಪರಿಚಿತ ಓದುಗರ ಆರನೇ ಭೇಟಿ ಕಾರ್ಯಕ್ರಮ ಭಾನುವಾರ ಯಶಸ್ವಿಯಾಗಿ ಜರುಗಿತು.

ಕಾರ್ಯಕ್ರಮದ ವಿಶೇಷವೇ ಕನ್ನಡ ಸಾಹಿತ್ಯ ಓದುಗರು ಪ್ರಕೃತಿಯ ಮಡಿಲಲ್ಲಿ ಐತಿಹಾಸಿಕ ಸ್ಥಳಗಳಲ್ಲಿ ಒಂದೆಡೆ ಸೇರಿ ಕನ್ನಡ ಸಾಹಿತ್ಯದ ಅಳಿವು ಉಳಿವು ಬಗ್ಗೆ ಚರ್ಚೆ, ಹರಟೆ ಸಾಹಿತ್ಯ ಪುಸ್ತಕಗಳ ಪರಿಚಯ ವಿಮರ್ಶೆ ಮಾಡಿದರು.

ಇಂದಿನ ದಿನಗಳಲ್ಲಿ ಕನ್ನಡ ಸಾಹಿತ್ಯದ ಗ್ರಂಥಗಳನ್ನು ಓದುವವರ ಸಂಖ್ಯೆಯನ್ನು ವೃದ್ಧಿಸಬೇಕಾಗಿದೆ, ಎಲ್ಲಡೆ ಕನ್ನಡ ಸಾಹಿತ್ಯ ಉಳಿಯಲಿ, ಕನ್ನಡ ಬೆಳೆಯಲಿ, ಓದುಗರು ಒಂದಡೆ ಸೇರಲಿ, ಎಂಬ ಗು-ರಿಯೊಂದಿಗೆ ಪ್ರತಿತಿಂಗಳು (ಅ)ಪ-ರಿಚಿತ ಓದುಗರ ಭೇಟಿಯನ್ನು ಮಾರ್ಗದರ್ಶಕ ಕವಿ ಡಾ. ಸಿದ್ದು ಸಾವಳಸಂಗ ಅವರು ಹಾಗೂ ಕಾರ್ಯಕ್ರಮದ ಸಂಚಾಲಕ ಡಿ. ಕುಮಾರ್ ಗಂಗಣ್ಣವರ್ ಅವರು ವಿಜಯಪುರದ ಐತಿಹಾಸಿಕ ತಾಣವಾದ ಬಾರಾಕಮಾನಿನಲ್ಲಿ ನಡೆಸಿಕೊಂಡು ಬರುತ್ತಿರುವುದಾಗಿ (ಅ)ಪರಿಚಿತ ಓದುಗರ ಆರನೇ ಭೇಟಿ ಕಾರ್ಯಕ್ರಮದಲ್ಲಿ ಅವರು ತಿಳಿಸಿದರು.

ಭೇಟಿಯಲ್ಲಿ ವಿಶೇಷವಾಗಿ ಸಾಹಿತ್ಯ ಓದುಗರಾದ ಪೊಲೀಸ್ ಅಧಿಕಾರಿ ಮಹಾಂತೇಶ ಪಾಟೀಲ ಅವರು ಸಾಹಿತ್ಯದ ಕುರಿತು ಮಾತನಾಡಿ, ಇಂದಿನ ಯುವಕರು ನಿತ್ಯಜೀವನದೊಂದಿಗೆ ಕನ್ನಡ ಸಾಹಿತ್ಯ ಹಾಗೂ ಕನ್ನಡ ಕಟ್ಟುವ ಗುರುತರ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿದೆ. ಇಲಾಖೆಯ ಕರ್ತವ್ಯ ಒತ್ತಡದಲ್ಲಿಯೂ ನಮ್ಮ ಸಾಹಿತ್ಯ ಓದುವ ಹವ್ಯಾಸ ಹೇಗೆ ರೂಢಿಸಿಕೊಂಡು ಹೋಗುಬೇಕು ಎಂಬುದರ ಹಲವು ವಿಚಾರಗಳನ್ನ ಓದುಗರೊಂದಿಗೆ ಹಚ್ಚಿಕೊಂಡರು.

ಮುಂಜಾನೆ 10 ಗಂಟೆಗೆ ಆಗಮಿಸಿದ ಸಾಹಿತ್ಯಸಕ್ತರು ಬಾರಾಕಮಾನ ಉದ್ಯಾನವನದಲ್ಲಿ ಅಲ್ಲಲ್ಲಿ ಕುಳಿತು ತಾವು ತಂದಿರುವ ಪುಸ್ತಕಗಳನ್ನು ಓದಿದರು. ಮಧ್ಯಾಹ್ನ 12 ಗಂಟೆಗೆ ಕಾರ್ಯಕ್ರಮವನ್ನು ಪ್ರಾರಂಭ ಮಾಡಲಾಯಿತು. ಓದುಗರು ಪರಸ್ಪರ ಪರಿಚಯದೊಂದಿಗೆ ಸಾಹಿತ್ಯ ಆಸಕ್ತರು ತಾವು ಓದಿದ ಪುಸ್ತಕಗಳ ಪರಿಚಯ ಹಾಗೂ ವಿಮರ್ಶೆ ಮಾಡಿದರು. ಪ್ರತಿಯೊಬ್ಬರೂ ಚಟುವಟಿ-ಕೆಯಲ್ಲಿ ತುಂಬಾ ಆಸಕ್ತಿಯಿಂದ ಭಾಗವಹಿಸಿದ್ದರು. ಅಲ್ಲದೆ ಬೇರೆ ಕೆಲವು ಜನ ಪುಸ್ತಕ ಓದಿನ ಬಗ್ಗೆ ಪರಸ್ಪರ ಚರ್ಚೆ ಪ್ರಶ್ನೆ ಸಲಹೆ ವಿಚಾರಗಳ ವಿನಿಮಯ ಮಾಡಿಕೊಂಡರು. ಎಲ್ಲರಿಗೂ ಸಿಹಿ ಹಂಚುವದರೊಂದಿಗೆ ಕಾರ್ಯಕ್ರಮವನ್ನು ಮುಕ್ತಾಯ ಮಾಡಲಾಯಿತು.

ಈ ಕಾರ್ಯಕ್ರಮದಲ್ಲಿ ಸಂಚಾಲಕ ಡಿ. ಕುಮಾರ ಗಂಗಣ್ಣವರ, ಸಾಹಿತ್ಯ ಓದುಗರಾದ ಪೊಲೀಸ್ ಅಧಿಕಾರಿ ಮಹಾಂತೇಶ ಪಾಟೀಲ, ಶಶಿಧರ ಸಿಂಧೆ, ಗೀತಾ ಗೌಡರ, ಸಿದ್ರಾಮ ಕೆಂಭಾವಿ ಇತರರು ಪಾಲ್ಗೊಂಡಿದ್ದರು.

# ಟೊಯೋಟಾ ಕಂಪನಿಯ ಬಿಎಸ್6 ಇಂಜಿನ್ ಫಾರ್ಚುನರ್ ವಾಹನ ಮಾದರಿ ಹಸ್ತಾಂತರ



**ವಿಜಯಪುರ :** ನಗರದ ಪ್ರತಿಷ್ಠಿತ ಬಿ.ಎಲ್.ಡಿ.ಇ ಸಂಸ್ಥೆಯ ಶ್ರೀ ಪಿ. ಜಿ. ಹಳಕಟ್ಟಿ ಅಭಿಯಾಂತ್ರಿಕ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಮೆಕ್ಯಾನಿಕಲ್ ಇಂಜನಿಯ-ರಿಂಗ ವಿಭಾಗ ಮತ್ತು ಬೆಂಗಳೂ-ರಿನ ಬಿಡದಿಯ ಟೊಯೋಟಾ ಕಿರ್ಲೋಸ್ಕರ ಮೋಟರ್ಸ್ ಪ್ರೈ.ಲಿ. ಇವರ ನಡುವೆ ಸಂಸ್ಥೆಯ ಅಧ್ಯಕ್ಷರು ಹಾಗು ದೂರದೃಷ್ಟಿಯುಳ್ಳ ನಾಯಕ ಡಾ. ಎಂ.ಬಿ ಪಾಟೀಲರ ಆಶಯದಂತೆ ಆಗಿರುವ ತಿಳುವಳಿಕೆ ಒಪ್ಪಂದ (ಎಂ. ಓ.ಯು) ಪ್ರತಿಫಲದ ಪ್ರಕಾರ ಮೆಕ್ಯಾನಿಕಲ್ ವಿಭಾಗದ ಆಯ್ದ ಬೋಧಕ ಮತ್ತು ತಾಂತ್ರಿಕ ಸಿಬ್ಬಂದಿಗಳಿಗೆ ತರಬೇತಿ ನೀಡಿ ಮೇ. 22 ರಂದು ನಡೆದ ಟೊಯೋಟಾ ಕಂಪನಿಯವರು ತಾವು ತಯಾರಿಸಿದ ಬಿಎಸ್6 ಇಂಜಿನ್‌ನೊಂದಿಗೆ ಇನ್ನಿತರ ಪ್ರಚಲಿತ ಉನ್ನತ ತಂತ್ರಜ್ಞಾನ ಹೊಂದಿರುವ ಫಾರ್ಚುನರ್ ವಾಹನದ ಚಾಸಿಸನ ಸ್ವಯಂಚಾಲಿತವಾಗಿ ಕಾರ್ಯ ನಿರ್ವಹಿಸಬಲ್ಲ ಕಟ್ ಸೆಕ್ಷನನ ಮಾದರಿ ಪ್ರಾತ್ಯಕ್ಷಿಕೆಯನ್ನು ಕಾಲೇಜಿನ ಮೆಕ್ಯಾನಿಕಲ್ ಇಂಜನಿಯರಿಂಗ್ ವಿಭಾಗಕ್ಕೆ ಹಸ್ತಾಂತರಿಸಿದರು.

ಇದನ್ನು ವಿಭಾಗದ ಬಾಷ್ ಪ್ರಯೋಗಾಯದಲ್ಲಿ ಎಲ್ಲ ಸಿಬ್ಬಂದಿಗಳೊಂದಿಗೆ ತಾಂತ್ರಿಕ ಮಹಾವಿದ್ಯಾಲಯದ ಪ್ರಿನ್ಸಿಪಾಲ ಡಾ. ವ್ಹಿ.ಜಿ. ಸಂಗಮ ಅವರು ಅನಾವರಣಗೊಳಿಸಿ ಎಲ್ಲರನ್ನು ಉದ್ದೇಶಿಸಿ ಮಾತನಾಡಿ, ಟೊಯೋಟಾ ಕಂಪನಿಯವರು ಒದಗಿಸಿದ ಈ ಸೌಲಭ್ಯವನ್ನು ಎಲ್ಲಾ ತಾಂತ್ರಿಕ ಕಾಲೇಜಿನ ಸಿಬ್ಬಂದಿಯವರು, ವಿದ್ಯಾರ್ಥಿಗಳು ಪಡೆದುಕೊಂಡು ಭವಿಷ್ಯದಲ್ಲಿ ಆಟೋಮೊಬೈಲ್ ಉದ್ಯಮ, ಮತ್ತು ರಸ್ತೆ ಸಾರಿಗೆ ತಂತ್ರಜ್ಞಾನದಲ್ಲಿ ಆಗುತ್ತಿರುವ ಅಭಿವೃದ್ಧಿಯ ಪ್ರಯೋಜನ ಪಡೆಯಲು ತಿಳಿಸಿದರು.

ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗವು ವಿದ್ಯಾರ್ಥಿಗಳಿಗೆ ಆಟೋಮೊಬೈಲ್ ಮತ್ತು 3ಡಿ ಮುದ್ರಣ ತಂತ್ರಜ್ಞಾನಗಳಲ್ಲಿ ತರಬೇತಿ ನೀಡಲು ಶ್ರೇಷ್ಠತಾ ಕೇಂದ್ರವನ್ನು ಸ್ಥಾಪಿಸಿದೆ. ಈ ಸೌಲಭ್ಯವು ವಿದ್ಯಾರ್ಥಿಗಳಿಗೆ ಅತ್ಯುತ್ತಮ ಉದ್ಯೋಗಾವಕಾಶಗಳನ್ನು ಸೃಷ್ಟಿಸಿದೆ.

ಈ ಸಂದರ್ಭದಲ್ಲಿ ಉಪಪ್ರಾಂಶುಪಾಲ ಡಾ. ಪಿ.ವ್ಹಿ. ಮಾಳಜಿ, ಡಾ. ಲೀನಾ ರಾಘಾ, ಮೆಕ್ಯಾನಿಕಲ್ ವಿಭಾಗದ ಮುಖ್ಯಸ್ಥ ಡಾ. ಆರ್. ಎನ್. ಜೀರಗಾಳ ಮತ್ತು ಎಲ್ಲಾ ಸಿಬ್ಬಂದಿ ಉಪಸ್ಥಿತರಿದ್ದರು.

# ವಿಶ್ವದಲ್ಲಿ ಭಾರತ ಶ್ರೀಮಂತ ರಾಷ್ಟ್ರವಾಗಲಿದೆ: ನಡಹಳ್ಳಿ



**ತಾಳಿಕೋಟೆ :** ಭಾರತ ದೇಶ ಈಗಾಗಲೇ ವಿವಿಧ ದೇಶಗಳಿಂದ ಮೆಚ್ಚುಗೆ ಪಡೆಯುತ್ತಾ ಸಾಗಿದ್ದು ಬರುವ 2040ನೇ ಸಾಲಿನಲ್ಲಿ ವಿಶ್ವದಲ್ಲಿಯೇ ಭಾರತ ಶ್ರೀ ಮಂತ ರಾಷ್ಟ್ರವಾಗಲಿದೆ ಎಂದು ಮಾಜಿ ಶಾಸಕ ಎ.ಎಸ್.ಪಾಟೀಲ(ನಡಹಳ್ಳಿ) ಅವರು ನುಡಿದರು.

ಸೋಮವಾರರಂದು ಆಪರೇಶನ್ ಸಿಂಧೂರ ಕಾರ್ಯಚರಣೆ ಮೂಲಕ ಉಗ್ರರು ಮತ್ತು ಪಾಪಿ ಪಾಕಿಸ್ಥಾನಕ್ಕೆ ತಕ್ಕ ಉತ್ತರ ನೀಡಿದ ದೇಶದ ವೀರ ಯೋಧರಿಗೆ ಬೆಂಬಲಿಸಿ ಪಟ್ಟಣದಲ್ಲಿ ಜಾತಿ ಬೇದ ಮರೆತು, ಪಕ್ಷ ಬೇದ ಮರೆತು ಏರ್ಪಡಿಸಲಾದ ತಿರಂಗಾ ಯಾತ್ರೆಯ ನೇತೃತ್ವ ವಹಿಸಿ ಮಾತನಾಡುತ್ತಿದ್ದ ಅವರು ಭಾರತದಲ್ಲಿಯ ಭಯೋತ್ಪಾದನೆಯನ್ನು ಸೋಲಿಸಿ ಭಾರತದ ಭದ್ರತೆಗಾಗಿ ನಿಲ್ಲಬೇಕೆಂಬ ಪಣತೊಟ್ಟ ದೇಶದ ಸೈನಿಕರು ಇತ್ತೀಚಗೆ ಪಾಕಿಸ್ಥಾನಕ್ಕೆ ಎಚ್ಚ-ರಿಕೆ ನೀಡಿದಲ್ಲದೇ ದೇಶದ ಸಾಹಸಮಯ ಕಾರ್ಯ ಹೇಗಿದೆ ಎಂಬುದನ್ನು ಅಥ-ರ್ೈಸಿ ತೋರಿಸಿದ್ದಾರೆಂದರು. 1 ಲಕ್ಷ 35 ಕೋಟಿ ದೇಶದ ಜನಸಂಖ್ಯೆಯಲ್ಲಿ ಜಮ್ಮು ಕಾಶ್ಮೀರದಲ್ಲಿ ಮೀಸಲಾತಿ ದೊರೆಯುವಂತೆ ಮಾಡಲಾಯಿತು. ಜಮ್ಮು ಕಾಶ್ಮೀರಕ್ಕೆ ಹೋಗುತ್ತಾರೆ ಭಯ ಹುಟ್ಟಿಸಬೇಕೆಂದು ಪಾಕಿಸ್ಥಾನಸಾಗಿತ್ತು 26 ಜನ ಅಮಾಯಕರನ್ನು ಕೊಂದ ನಂತರ ಜಮ್ಮು ಕಾಶ್ಮೀರದ ಜನತೆ ಭಾರತದತ್ತ ವಲುಮೆ ತೋರಲು ಕಾರಣವಾಯಿತೆಂದರು. ಜಮ್ಮು ಕಾಶ್ಮೀರ ವೆಂಬುದು ಅವಿಭಾಜ್ಯ ಅಂಗವಾಗಿದೆ ಎಂದು ಹೇಳಿದ ಪಾಟೀಲರು ಪಾಕಿಸ್ಥಾನವೆಂಬುದು ಜನ್ಮ ತಾಳಿದಾಗಿನಿಂದಲೂ ಭಯೋತ್ಪಾದನೆಯೆಂಬುದನ್ನು ಹುಟ್ಟು ಹಾಕುತ್ತಾಸಾಗಿದೆ ಎಂದು 2014ನೇ ಸಾಲಿನಲ್ಲಿ ಜರುಗಿದ ಘಟನೆಗಳ ಕುರಿತು ಪಾರ್ಲಿಮೆಂಟ್ ಮೇಲೆ ದಾಳಿಗೆ ಸಜ್ಜಾಗಿದ್ದರ ಕುರಿತು ದೇಹಲಿ, ಅಹಮದಾಬಾದದಲ್ಲಿಯೂ ಗುಂಡು ಹಾರಿಸಿದ್ದರ ಕುರಿತು ಭಯೋತ್ಪಾದಕರು ಮಾಡಿದ ದುಸ್ಕೃತ್ಯದ ಕುರಿತು ನಾವು ಭಲವಾಗಿ ಖಂಡಿಸುತ್ತೇವೆಂದರು. ದೇಶದ ಸೈನಿಕರಿಗೆ ಪೂರ್ಣ ಪ್ರಮಾಣದ ಅಧಿಕಾರ ಈ ಹಿಂದೆ ದೊರೆತ್ತಿದಿಲ್ಲಾ ಈಗ ಪೂರ್ಣ ಪ್ರಮಾಣದ ಅಧಿಕಾರ ದೊರೆತಿದ್ದರಿಂದ ಇತ್ತೀಚನೆ ನರೇಂದ್ರ ಮೋದಿ ಅವರು ಪೂರ್ಣ ಪ್ರಮಾಣದ ಅಧಿಕಾರ ನೀಡಿದ್ದ-ರಿಂದ ಪಾಕಿಸ್ಥಾನ ಬಾಲ ಮುಚ್ಚಿಕೊಂಡು ಕೂಡ್ರಲು ಕಾರಣವಾಯಿತೆಂದು ಹೇಳಿದ ಅವರು ಎಲ್ಲರೂ ದೇಶಾಭಿಮಾನವನ್ನು ರೂಡಿಸಿಕೊಳ್ಳಬೇಕು ದೇಶ ಉಳಿದರೆ ನಾವೆಲ್ಲರೂ ಉಳಿಯುತ್ತೇವೆ ಅದುವೇ ನಮ್ಮ ಆದ್ಯಕರ್ತವ್ಯವಾಗಿದೆ ಎಂದು ಈ ಹಿಂದೆ ಪಾಕಿಸ್ಥಾನದ ಉಗ್ರರನ್ನು ನಾಶ ಮಾಡಿದ್ದರ ವಿಷಯ ಕುರಿತು ಎಳೆ ಎಳೆಯಾಗಿ ಉಪಸ್ಥಿತ ದೇಶಾಭಿಮಾನಿಗಳಿಗೆ ವಿವರಿಸಿದರು.

ಇನ್ನೋರ್ವ ಮಾಜಿ ಸೈನಿಕರಾದ ರಾಮನಗೌಡ ಬಿರಾದಾರ ಅವರು ಮಾತನಾಡಿ 26 ಜನರಿಗೆ ಹೊಡೆದ ಪಾಕಿಸ್ಥಾನದ ಮೇಲೆ ಇದ್ದಂತಹ ಸಿಟ್ಟು ಅಲ್ಲಿಯ 26 ಸಾವಿರ ಜನರಿಗೆ ಹೊಡೆದರೂ ನಮ್ಮ ಸಿಟ್ಟು ಹೋಗಲಾರದೆಂದರು. ತಾಳಿಕೋಟೆ ಪಟ್ಟಣ ರಕ್ಕಸಗಿ ತಂಗಡಗಿ ಕಾಳಗದಿಂದ ಹೆಸರುವಾಸಿಯಾಗಿದೆ ಈ ಭಾಗ ಯುದ್ದದ ಭೂಮಿಯಾಗಿದ್ದು ಈ ಭೂಮಿಯಲ್ಲಿ ಜನ್ಮತಾಳಿದ ನಾವು ಸಾಮಾನ್ಯವಲ್ಲಾ ಶಕ್ತಿ ಕೇಂದ್ರವಾಗಿದ್ದ ತಾಳಿಕೋಟೆ ಪಟ್ಟಣ ಈ ಭಾಗದಲ್ಲಿಯ ಜನತೆ ಸುಮಾರು 200 ಕ್ಕೂ ಮೇಲ್ಪಟ್ಟು ಸೈನ್ಯದಲ್ಲಿ ಸೇವೆಗೆ ಮುಂದಾಗಿದ್ದು ಅವರೂ ಕೂಡಾ ದೇಶದ ಬಗ್ಗೆ ಅಭಿಮಾನ ಇಟ್ಟುಕೊಂಡು ನಡೆದಿದ್ದಲ್ಲದೇ ಯುದ್ದದ ಸ್ಥಿತಿಗತಿ ನೋಡಿ ವಿವಾಹದಿನವಾಗಿದ್ದರೂ ಕೂಡಾ ನಮ್ಮ ಸೈನಿಕರು ಆ ಕಾರ್ಯಕ್ರಮವನ್ನು ಬಿಟ್ಟು ನಮ್ಮ ದೇಶದ ಯುದ್ದದ ಭೂಮಿಗೆ ತಗಲು ಹಾಕಿಕೊಂಡ ಪಾಕಿಸ್ಥಾನದ ವಿರೂದ್ದ ಹೋರಾಡಲು ಸಿದ್ದವಾಗಿರುವದು ಹೆಮ್ಮೆಯ ವಿಷಯವಾಗಿದೆ ಎಂದರು.

ಇನ್ನೋರ್ವ ಮಾಜಿ ಸೈನಿಕರಾದ ಶಾಂತಗೌಡ ಬಿರಾದಾರ ಅವರು ಮಾತನಾಡಿ ಪಾಕಿಸ್ಥಾನದಲ್ಲಿಯ ಜನರು ನಾಶವಾಗಬಾರದೆಂಬ ಉದ್ದೇಶದಿಂದ ಉಗ್ರರ ಸ್ಥಳಗಳನ್ನೇ ನಾಶ ಮಾಡಲಾಯಿತು ಆ ಸ್ಥಾನಗಳನ್ನು ಗುರಿಯಾಗಿಟ್ಟಿಸಿಕೊಂಡ ನಮ್ಮ ಸೈನಿಕರು ಅಲ್ಲಿಯ ಉಗ್ರರನ್ನು ನಾಶ ಮಾಡಿದರೂ ಸಹ ಇನ್ನೂ 6 ಜನರು ಉಳಿದಿದ್ದಾರೆ ಅವರನ್ನು ಬಲಿ ತೆಗೆದುಕೊಂಡಾಗ ನಮ್ಮ ಆಸೆ ಇಡೇರಲಿದೆ ಆದರೂ ನಮ್ಮ ಸೈನಿಕರು ಪಾಕಿಸ್ಥಾನದ ಚಾಳಿಯನ್ನು ಅರೀತುಕೊಂಡಿದ್ದರಿಂದ ಈಗಲೂ ಸಹ ಗಡಿ ಕಾಯುವದರಲ್ಲಿ ಭಾರಿ ಎಚ್ಚರಿಕೆಯಿಂದ ಇದ್ದಾರೆಂದರು.

ಇನ್ನೋರ್ವ ಸೈನಿಕನ ಧರ್ಮ ಪತ್ನಿ ಪಾರ್ವತಿ ಸೂಗೂರ ಹಾಗೂ ಭೋರಮ್ಮ ಕುಂಭಾರ, ಕುಮಾರಿ ಭಾಗ್ಯಶ್ರೀ ಪಾಟೀಲ ಅವರು ಮಾತನಾಡಿ ತಮ್ಮ ಮನೆತನದಲ್ಲಿಯ ಸೈನಿಕರು ಯುದ್ದದಲ್ಲಿ ಪಾಲ್ಗೊಂಡು ತಮ್ಮ ದಿಟ್ಟತನ ತೋರಿದ್ದರ ಕುರಿತು ಹಾಗೂ ಇತ್ತೀಚಗೆ ಜರುಗಿದ ಘಟನಾವಳಿಗಳ ಕು-ರಿತು ವಿವರಿಸಿದರಲ್ಲದೇ ಭಾರತ ದೇಶ ಇದು ವಿಶ್ವಗುರು ಆಗಲಿದೆ ಯಾಕೆಂದರೆ ನಮ್ಮ ಜೀವನ ಶೈಲಿಯಲ್ಲಿ ನಾವಾಗಿದ್ದೇವೆ ಬಿಸಿಲು ಮಳೆ ಎಲ್ಲವನ್ನೂ ಸಹಿಸಿಕೊಂಡು ಬಧುಕಿನಲ್ಲಿ ದೇಶವನ್ನು ಕಾಪಾಡುತ್ತಾಸಾಗಿದ್ದ ಸೈನಿಕರಿಗೂ ಸಹ ನಾವು ಕೂಡಾ ಸಹಾಯ ಹಸ್ತ ಕಲ್ಪಿಸಲು ಕಿತ್ತೂರ ಚನ್ನಮ್ಮಳಂತೆ, ಒನಕೆ ಓಬವ್ವನಂತೆ ದಿಟ್ಟತನವನ್ನು ತೋರಿಸಲು ನಾವೂ ಕೂಡಾ ಒಬ್ಬೊಬ್ಬರನ್ನು ಎಳೆದು ಹೊಡೆಯುವಂತಹ ಕಾರ್ಯವೂ ಕೂಡಾ ಮಾಡುತ್ತೇವೆಂದರು.

ಸಾನಿದ್ಯ ವಹಿಸಿದ ಕೆಸರಟ್ಟಿ ಶಂಕರಲಿಂಗ ಮಠದ ಶ್ರೀ ಸೋಮಲಿಂಗ ಮಹಾಸ್ವಾಮಿಗಳು, ಗುಂಡಕನಾಳ ಹಿರೇಮಠದ ಶ್ರೀ ಗುರುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿ ದೇಶದ ರಾಷ್ಟ್ರದ ವಿಚಾರ ಬಂದಾಗ ತಾಳಿಕೋಟೆಯಲ್ಲಿ ರಾಷ್ಟ್ರದ ಒಂದೇ ಪಕ್ಷವಿರುತ್ತದೆ ಅದುವೇ ತಿರಂಗಾವೆಂಬ ಪಕ್ಷವೆಂದರು.

## ಭಾನು ಮುಷ್ತಾಕ್ ಮಾನವೀಯತೆ ಮತ್ತು ಭಾರತೀಯತೆಯನ್ನು ಬೆಸೆಯುವ ನೇಕಾರರು: ಕೆ.ವಿ.ಪ್ರಭಾಕರ್

## ಭಾನು ಅವರಿಗೆ ಬಂದಿರುವ ಬೂಕರ್ ಇಂಟರ್ ನ್ಯಾಷನಲ್ ಪ್ರಶಸ್ತಿ ನಾಗರಿಕತೆಯ ಬಯಕೆ ಆಗಿದೆ: ಕೆ.ವಿ.ಪಿ

# ಬಾನು ಮುಷ್ತಾಕ್ ನಾಲ್ಕು ಗೋಡೆಗಳ ನಡುವೆ ಮೈಗೆ ಎಣ್ಣೆ ಹಚ್ಚಿಕೊಂಡು ಸುರಕ್ಷಿತವಾಗಿ ಕುಳಿತು ಬರೆದ ಲೇಖಕಿಯಲ್ಲ: ಚಳವಳಿಗಳಲ್ಲಿ ಬೆರೆತ ಬಂಡಾಯಗಾರ್ತಿ: ಕೆ.ವಿ.ಪ್ರಭಾಕರ್ ವಿಶ್ಲೇಷಣೆ

**ಬೆಂಗಳೂರು :** ಭಾನು ಮುಷ್ತಾಕ್ ಮಾನವೀಯತೆ ಮತ್ತು ಭಾರತೀಯತೆಯನ್ನು ಬೆಸೆಯುವ ನೇಕಾರರು. ಇವರಿಗೆ ಬಂದಿರುವ ಬೂಕರ್ ಇಂಟರ್ ನ್ಯಾಷನಲ್ ಪ್ರಶಸ್ತಿ ನಾಗರಿಕತೆಯ ಬಯಕೆ ಆಗಿದೆ ಎಂದು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ್ ಅವರು ನುಡಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಬಹುರೂಪಿ ಮತ್ತು ಗಾಂಧಿ ಪ್ರತಿಷ್ಠಾನ ಗಾಂಧಿ ಭವನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ "ಬೂಕರ್ ಇಂಟರ್ ನ್ಯಾಷನಲ್ ಪ್ರಶಸ್ತಿ ಪುರಸ್ಕೃತ ಬಾನು ಮುಷ್ತಾಕ್ ಅವರನ್ನು ಅಭಿನಂದಿಸಿ ಮಾತನಾಡಿದರು.

ವಿಚ್ಛಿದ್ರಕಾರಿ ಶಕ್ತಿಗಳು, ಮತಾಂದತೆ ಹಾಗೂ ಮೂಲಭೂತವಾದ ಒಟ್ಟಾಗಿ ಬೆಸೆದುಕೊಂಡು ಜಗತ್ತನ್ನು ನಾಶ ಮಾಡುತ್ತಿರುವ ಹೊತ್ತಲ್ಲಿ, ಭಾನು ಮುಷ್ತಾಕ್ ಅವರ ಮಾನವೀಯತೆಯ ಬೆಸುಗೆ ಮತ್ತು ಭಾರತೀಯತೆಯ ಬೆಸುಗೆಗೆ ಬೂಕರ್ ಇಂಟರ್ ನ್ಯಾಷನಲ್ ಪ್ರಶಸ್ತಿ ಬಂದಿದೆ ಎಂದು ಮೆಚ್ಚುಗೆ ಸೂಚಿಸಿದರು.

ಸಾಹಿತ್ಯದ ಹೆಸರಿನಲ್ಲಿ ಕೊಡುತ್ತಿರುವ ಈ ಸಂದೇಶವು, ಎಲ್ಲ ಮೂಲಭೂತವಾದಿ ಶಕ್ತಿಗಳಿಗೆ ಕೊಟ್ಟಿರುವ ಕಪಾಳಮೋಕ್ಷ ಎಂದು ನಾನು ಭಾವಿಸುತ್ತೇನೆ. ಇದು ಎಲ್ಲಾ ರೀತಿಯ ಧಾರ್ಮಿಕ ದರ್ಪಗಳಿಗೆ ಕೊಟ್ಟಿರುವ ಏಟು ಮತ್ತು ಮಾನವೀಯ ಧರ್ಮಕ್ಕೆ,

ಎಲ್ಲಾ ಧರ್ಮದಲ್ಲಿರುವ ಮಾನವೀಯ ವ್ಯಕ್ತಿತ್ವಗಳಿಗೆ ಸಿಕ್ಕಿರುವ ಮನ್ನಣೆ ಕೂಡ ಆಗಿದೆ.

ಕೆಲವು ಪ್ರಗತಿಪರ ಲೇಖಕರೇ ಬಾನು ಗಿಂತ ದೊಡ್ಡ ಸಾಹಿತಿಗಳಿದ್ದಾರೆ ಎಂದು ಗೊಣಗಿದ್ದು ನನಗೆ ಗೊತ್ತಿದೆ. ನಿಜ, ಭಾನು ಅವರಿಗಿಂತ ಹೆಚ್ಚೆಚ್ಚು ಪುಸ್ತಕ ಪ್ರಕಟಿಸಿದ ಲೇಖಕರಿದ್ದಾರೆ ಹಾಗೆಯೇ ದೊಡ್ಡ ಮಹಿಳಾ ಲೇಖಕಿಯರು ಬಹಳಷ್ಟು ಇದ್ದಾರೆ. ಸೌಂದರ್ಯ ಮಿಮಾಂಸೆಯ ದೃಷ್ಟಿಯಿಂದ ಬಾನುವನ್ನು ಮೀರಿಸಿದ ಲೇಖಕಿಯರೂ ಇದ್ದಾರೆ, ಅವರಿಗೆ ಪ್ರಶಸ್ತಿ ದೊರಕಿದರೂ ನನಗೆ ವೈಯುಕ್ತಿಕವಾಗಿ ಸಂತೋಷವೇ.

ಆದರೆ ಬಾನು ಅವರಿಗೆ ಪ್ರಶಸ್ತಿ ಲಭಿಸಿರುವುದು ಹೆಚ್ಚಿನ ಸಂತೋಷವನ್ನು ನೀಡಿದೆ ಏಕೆಂದರೆ ಮೂಲಭೂತವಾದಿ ಶಕ್ತಿಗಳಿಗೆ ಎಲ್ಲರೂ ಶರಣಾಗುತ್ತಿರುವ ಅಸಹಾಯಕತೆಯ ಹೊತ್ತಿನಲ್ಲಿ ಬಾನು ಅವರು ರಾಜಿ ಮಾಡಿಕೊಳ್ಳದೆ ಹೇಳಬೇಕಾದ್ದನ್ನು ಮುಲಾಜಿಲ್ಲದೆ ತಮ್ಮ ಕತೆಗಳಲ್ಲಿ, ಭಾಷಣಗಳಲ್ಲಿ, ಲೇಖನಗಳಲ್ಲಿ ದಾಖಲಿಸಿದ್ದಾರೆ. ಈ ಕಾರಣಕ್ಕೆ ಬಾನು ಮುಷ್ತಾಕ್ ಅವರಿಗೆ ಸಿಕ್ಕಿರುವ ಮನ್ನಣೆ ಕನ್ನಡದ ಮೂಲಕ ಇಡೀ ನಾಗರಿಕತೆಯ ಆಶಯಕ್ಕೆ ಸಿಕ್ಕಿರುವ ಮನ್ನಣೆ ಅಂಥಲೇ ಭಾವಿಸುತ್ತೇನೆ. ಇದಕ್ಕಾಗಿ ಹೆಚ್ಚು ಸಂತೋಷ ಪಡುತ್ತೇನೆ.

ಬಾನು ಅವರು ತಾವು ಬದುಕಿರುವ ಸಂದರ್ಭವನ್ನು, ಸಮಾಜವನ್ನು ಮಾತ್ರವಲ್ಲ ದೇವರನ್ನೂ ಕೂಡ ಹೆಣ್ಣಿನ ದೃಷ್ಟಿಯಿಂದಲೇ ನೋಡಿದ್ದಾರೆ.

ಬಂಡಾಯ ಸಾಹಿತ್ಯದ ಧಾರೆಯಲ್ಲಿ ಬಾನು ಅವರದ್ದು ವಿಶಿಷ್ಟವಾದ ಧ್ವನಿ. ತಮ್ಮ ಕಥೆಗಳಲ್ಲಿ ಮೆಲು ಧ್ವನಿಯಲ್ಲಿ ಇದು ಸಾಧ್ಯವಿದೆಯೇ, ಹೀಗಿರಬಹುದೇ, ಹೀಗಿರುವುದು ಸರಿಯೇ, ಇದಕ್ಕೆ ನಿಮ್ಮ ಅಂತ:ಸಾಕ್ಷಿ ಒಪ್ಪುತ್ತದೆಯೇ ? ಎಂಬ ಪ್ರಶ್ನೆಗಳನ್ನು ತಮಗೆ ತಾವೇ ಕೇಳಿಕೊಳ್ಳುತ್ತಾ ಇಡೀ ನಾಗರಿಕತೆಯನ್ನೇ ಪ್ರಶ್ನಿಸುತ್ತಾರೆ.

ಬೂಕರ್ ಇಂಟರ್ ನ್ಯಾಷನಲ್ ಪ್ರಶಸ್ತಿ ಘೋಷಣೆಯಾದ ಬಳಿಕ ಬಾನು ಅವರ 'ಒಮ್ಮೆ ಹೆಣ್ಣಾಗು ಪ್ರಭುವೆ' ಕಥೆಯನ್ನು ನಾನು ಓದಿದೆ. ಇದರಲ್ಲಿ ಅಂತ:ಕರಣವಿರುವ ದೇವರೂ ಸಹ ಗಂಡಾಳಿಕೆಯನ್ನು ಎತ್ತಿಹಿಡಿಯುವುದಾದರೇ, ಅವನು ದೇವರು ಹೇಗಾಗಲು ಸಾಧ್ಯ? ಹೆಣ್ಣನ್ನು ಮನುಷ್ಯಳಾಗಿ ಒಪ್ಪಿಕೊಳ್ಳುವ ಶಕ್ತಿ ಇರುವ ದೇವರನ್ನು ಒಪ್ಪಿಕೊಳ್ಳಬಹುದು, ಇಂತಹ ಶಕ್ತಿಯನ್ನು ಅಂತಿಮ ಶಕ್ತಿಯೆಂದು ಒಪ್ಪಿಕೊಳ್ಳಬಹುದು, ಹೆಣ್ಣಿನ ಸಂವೇದನೆಯನ್ನು ಬೆಳೆಸಿಕೊಳ್ಳಲು ದೈವವಾದರೂ ಪ್ರೇರೇಪಿಸಲಿ ಎಂಬ ಭಾವವನ್ನು ವ್ಯಕ್ತಪಡಿಸಿದ್ದಾರೆ.

'ದೇವರು ಮತ್ತು ಅಪಘಾತ' ನನಗೆ ಇಷ್ಟವಾದ ಅತ್ಯುತ್ತಮ ಕಥೆಗಳಲ್ಲಿ ಒಂದು. ಇದರಲ್ಲಿ ಹಸಿವಿನ ಕನ್ನಡಿಯಲ್ಲಿ ದೇವರನ್ನು ಪ್ರಶ್ನಿಸುತ್ತಾರೆ. ಈ ಕತೆಯಲ್ಲಿ ಬರುವ ಒಂದು ಸಾಲು ನನ್ನನ್ನು ತೀವ್ರವಾಗಿ ಕಾಡಿತು. ಹೆಣವನ್ನು ಶುಚಿಗೊಳಿಸುವ ಕೆಲಸ ಮಾಡುವ ಆ ಹೆಣ್ಣು, "ಈ ಹಳ್ಳಿಯಲ್ಲಿ ಒಂದೂ ಸಾವಾಗಿಲ್ಲ, ಹೀಗಿರುವಾಗ ನಾವು ಬದುಕುವುದಾದರೂ ಹೇಗೆ? ಎಂದು ದೇವರನ್ನು ಪ್ರಶ್ನಿಸುತ್ತಾರೆ. ಸಾವಿನ ಮೂಲಕವೇ ಬದುಕನ್ನು ಕಟ್ಟಿಕೊಳ್ಳಬೇಕಾದ ಅನಿವಾರ್ಯತೆಯನ್ನು ಕತೆಯಲ್ಲಿ ತೋರಿಸಲಾಗಿದೆ. ಕಥೆಯಲ್ಲಿ , ಅಪಘಾತದಲ್ಲಿ ಮೂವರು ಹೆಣ್ಣುಮಕ್ಕಳು ಸಾವಿಗೀಡಾದಾಗ, ಆ ತಾಯಿಯಲ್ಲಿ ಸಂತೋಷ ಕಾಣುತ್ತದೆ. ಸಾವು ಕಂಡಾಗ ಇಸ್ಲಾಂನಲ್ಲಿ ಹೇಳುವ ಉದ್ಗಾರವೂ ಕೂಡ ತನಗೆ ಮರೆತುಹೋಗಿ, ಇಂದು ತನ್ನ ಮನೆಯಲ್ಲಿ ಎಲ್ಲರೂ ಹೊಟ್ಟೆತುಂಬ ಉಣಬಹುದು ಎಂಬ ಭಾವ ವ್ಯಕ್ತವಾಗಿದೆ.

ಸಾವಿನ ಮನೆಯಲ್ಲಿ ತಾನು ಅನ್ನ ತಿನ್ನುವಾಗ ಮನೆಯಲ್ಲಿ ಹಸಿದ ಬಾಣಂತಿ ಮಗುವಿನ ಜ್ಞಾಪಕವಾಗಿ, ತಾನು ಆಹಾರ ಸೇವಿಸಲೋ ,ಬೇಡವೋ ಎಂಬ ಬಗ್ಗೆ ತಾಯಿಯಲ್ಲಿ ಗೊಂದಲ ಶುರುವಾಗುತ್ತದೆ. 'ಕೊನೆಗೂ ಕರುಳಿನ ಕೂಗು ಗೆದ್ದವು' ಎಂದು ಹಸಿವಿನ ಕೂಗು ಗೆದ್ದಿರುವ ಬಗ್ಗೆ ಲೇಖಕಿ ಪ್ರಸ್ತಾಪಿಸಿದ್ದಾರೆ. ಎಲ್ಲರ ಆಶ್ರಯದಾತ ಎಂದು ಕರೆಯಲ್ಪಡುವ ದೇವರು , ತಮಗೆ ಮಾತ್ರ ಅನ್ನವನ್ನು ನೀಡುತ್ತಿಲ್ಲವಲ್ಲ ಎಂಬ ಪ್ರಶ್ನೆಯನ್ನು ತಾಯಿ ಕೇಳುತ್ತಾಳೆ.

'ಇದ್ದತ್' ಕತೆಯಲ್ಲಿ ವಿಧವೆಯೊಬ್ಬಳು ಇಸ್ಲಾಂ ಧರ್ಮದಂತೆ 45 ದಿನಗಳ ದರ್ಮಾಚರಣೆಯ ಸಂದರ್ಭದಲ್ಲಿನ ಅವಳ ಬದುಕು ಹಿಂಸಾತ್ಮಕವಾಗಿರುವ ಬಗೆ , ಹಾಗೂ ತನಗೆ ಮುಂದೆ ಉತ್ತಮ ಬದುಕು ಸಿಗಬಹುದೇ ಎಂಬ ಆಸೆಯೂ ಚಿಗುರೊಡೆದ ಭಾವವನ್ನು ಬಾನು ವ್ಯಕ್ತಪಡಿಸಿದ್ದಾರೆ.

ಬಾನು ಅವರ ಕತೆಗಳು , ಲೋಕದ ಜೊತೆಗೆ ನಡೆಸುವ ಮಾತುಗಳು ಆಗಿವೆ.

ಬಾನು ಅವರು ಇತರೆ ದೊಡ್ಡ ಲೇಖಕರಿಗಿಂತ ನಾಲ್ಕು ಹೆಜ್ಜೆ ಮುಂದೆ ಹೋಗಿದ್ದಾರೆಂದು ನನಗೆ ಅನ್ನಿಸುವುದು ಏಕೆ ಗೊತ್ತಾ? ಭಾನು ಅವರು ನಾಲ್ಕು ಗೋಡೆಗಳ ಮಧ್ಯೆ ಕುಳಿತು ಮೈಗೆ ಎಣ್ಣೆ ಹಚ್ಚಿಕೊಂಡು ಸೇಫಾಗಿ ಬರವಣಿಗೆ ಮಾಡಿದವರಲ್ಲ.

ಜನಪರ ಚಳವಳಿಗಳೊಂದಿಗೆ ತಮ್ಮನ್ನು ತಾವು ಗುರುತಿಸಿಕೊಂಡಿದ್ದು, ಹಾಗೂ ಖಚಿತ ಜನಪರ ನಿಲುವನ್ನು ತೆಗೆದುಕೊಂಡು ಆ ನಿಲುವಿಗೆ ಬದ್ಧವಾಗಿ ನಿಲ್ಲುವ ಗಟ್ಟಿತನ ಅವರಲ್ಲಿದೆ.

ಲಂಕೇಶ್ ಅವರಿಗೇ ರಾಜಕೀಯ ಪಾಠ ಮಾಡಿದ್ದರು

ಬಾನು ಅವರು ಒಬ್ಬ ಅನುಭವಿ ರಾಜಕಾರಣಿ ಕೂಡ ಹೌದು. ಏಕೆಂದರೆ ಇವರು ಲಂಕೇಶ್ ಅವರಿಗೂ ರಾಜಕೀಯ ತಿಳಿವಳಿಕೆ ಹೇಳಿದ್ದರು.

ನಗರಸಭೆ ಚುನಾವಣೆಗೆ ಸ್ಪರ್ಧಿಸಿದ್ದ ಬಾನು ಅವರಿಗೆ ರಾಜಕೀಯ ರಣರಂಗದ ಪರಿಚಯವೂ ಇದೆ. ಲಂಕೇಶ್ ಪ್ರಗತಿ ರಂಗ ಮಾಡುವ ಹೊತ್ತಲ್ಲಿ, "ರಾಜಕೀಯ ಪಕ್ಷ ಮಾಡಬೇಡಿ. ಪ್ರಗತಿರಂಗವನ್ನು ಶುರು ಮಾಡಬೇಡಿ. ಅದು ವಿಫಲವಾಗಲಿದೆ, ಗೆಲ್ಲಲು ಸಾಧ್ಯವಿಲ್ಲ ಎಂದು ಹೇಳಿದಾಗ ಲಂಕೇಶ್ ಅದನ್ನು ಒಪ್ಪುವುದಿಲ್ಲ .

ತಾವು ನಗರಸಭೆ ಚುನಾವಣೆಗೆ ನಿಂತಾಗ ಉಂಟಾದ ಕಷ್ಟವನ್ನು ಹೇಳಿದ ಬಾನು, ಪಕ್ಷ ಕಟ್ಟಿ ಇಡೀ ರಾಜ್ಯದಲ್ಲಿ ಪಕ್ಷವನ್ನು ನಿಭಾಯಿಸುವುದು ಎಷ್ಟು ಕಷ್ಟವಾಗಬಹುದು ಎಂದು ವಿವರಿಸುತ್ತಾರೆ. ಲಂಕೇಶ್ ಅವರಿಗೆ ಮುಖ್ಯಮಂತ್ರಿಗಳನ್ನು ಮಂಡಿಯೂರುವಂತೆ ಮಾಡುವ ಶಕ್ತಿ ಇದ್ದ ಹೊತ್ತಲ್ಲೇ ಬಾನು ಅವರು ಸ್ವತಃ ಲಂಕೇಶ್ ಅವರಿಗೇ ರಾಜಕೀಯ ತಿಳಿವಳಿಕೆ ಹೇಳಿದ್ದರು. ಇವರ ಈ ತಿಳಿವಳಿಕೆ ಸತ್ಯ ಕೂಡ ಆಯ್ತು. ಪ್ರಗತಿರಂಗ ಸಕ್ಸಸ್ ಆಗಲಿಲ್ಲ. ಬಾಬಾ ಬುಡನ್ ಗಿರಿ ಘಟನೆಯಾಗಿರಲಿ, ಯಾವುದೇ ಹೋರಾಟವಾಗಿರಲಿ ಎಲ್ಲಾ ಹೊತ್ತಿನಲ್ಲಿಯೂ ಬಾನು ಅವರು ಸಾಮಾಜಿಕ, ರಾಜಕೀಯ ಕಾರ್ಯಕರ್ತೆಯಾಗಿ ಗಟ್ಟಿಯಾಗಿ ನಿಂತಿದ್ದಾರೆ. ಪತ್ರಕರ್ತೆಯಾಗಿ, ಬರಹಗಾರರಾಗಿ, ಸಾಮಾಜಿಕ ಹೋರಾಟಗಾರ್ತಿಯಾಗಿ, ಮಹಿಳೆಯಾಗಿ, ಮುಸ್ಲಿಂ ಮಹಿಳೆಯಾಗಿ ಬಾನು ಅವರಿಗೆ ಬಹಳ ದೊಡ್ಡ ಸ್ಥಾನವಿದೆ ಎನ್ನುವುದನ್ನು ಬೂಕರ್ ಇಂಟರ್ ನ್ಯಾಷನಲ್ ಪ್ರಶಸ್ತಿ ಇಡೀ ಜಗತ್ತಿಗೆ ಸಾರಿ ಹೇಳಿದೆ.

ಒಟ್ಟಿನಲ್ಲಿ ಬಾನು ಅವರಿಗೆ ಸಿಕ್ಕಿರುವ ವಿಶ್ವ ಮನ್ನಣೆ ಏಕ ಕಾಲಕ್ಕೆ ಕನ್ನಡಕ್ಕೆ, ಭಾರತೀಯ ಸಾಹಿತ್ಯ ಪರಂಪರೆಗೆ, ನಮ್ಮ ನಾಡಿನ ಸಾಂಸ್ಕೃತಿಕ ನಾಯಕರಾಗಿರುವ ನಿಜವಾದ ವಿಶ್ವಗುರು ಬಸವಣ್ಣನವರಾದಿಯಾಗಿ ಅಕ್ಕಮಹದೇವಿ ಮತ್ತು ಎಲ್ಲಾ ಶರಣ, ಸೂಫಿ ಪರಂಪರೆಗೆ, ಈ ಪರಂಪರೆಯ ಮೌಲ್ಯಗಳಿಗೆ ಸಿಕ್ಕಿರುವ ಮನ್ನಣೆ ಎಂದು ಭಾವಿಸುತ್ತೇನೆ. ವಿಶ್ವ ಮಾನ್ಯತೆ ಗಳಿಸಿರುವ ಬಾನು ಮುಷ್ತಾಕ್ ಅವರಿಗೆ ಸ್ಥಳೀಯವಾಗಿ, ನಮ್ಮ ರಾಜ್ಯದಲ್ಲಿ ಸಿಗಬೇಕಾದ ಎಲ್ಲಾ ರೀತಿಯ ಅರ್ಹ ಗೌರವ ಮತ್ತು ಮನ್ನಣೆಗಳು ಸಿಗಲಿವೆ. ಜೂನ್ 2 ರಂದು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್ ನಲ್ಲಿ ಸಮಸ್ತ ಕನ್ನಡ ಜಗತ್ತಿನ ಪರವಾಗಿ ಅಭಿನಂದನಾ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದರು.

# ಪ್ರಸಾದ ಸೇವೆ ಅತ್ಯಂತ ಶ್ರೇಷ್ಠ: ಪುಣ್ಯದ ಕಾರ್ಯ



**ಬನಹಟ್ಟಿ :** ಪ್ರಸಾದ ಸೇವೆ ಶ್ರೇಷ್ಠವಾದ ಅತ್ಯಂತ ಪುಣ್ಯದ ಕಾರ್ಯವಾಗಿದೆ. ಮುಂದಿನ ದಿನಗಳಲ್ಲಿ ಭಕ್ತರ ಪ್ರಸಾದಕ್ಕಾಗಿ ಸುಸಜ್ಜಿತ ಭವನ ನಿರ್ಮಾಣ ಮಾಡುತ್ತಿರುವುದು ಕೂಡಾ ಶ್ರೇಷ್ಠವಾದ ಕಾರ್ಯವಾಗಿದೆ. ಪರಂಪರಾಗತವಾಗಿ ಶರಣರು ನಡೆಸಿಕೊಂಡು ಬಂದಿರುವ ಪ್ರಸಾದ ಕಾರ್ಯ ಇಂದಿನ ದಿನಗಳಲ್ಲಿಯೂ ನಡೆದುಕೊಂಡು ಬಂದಿದೆ. ಇದು ನಿರಂತರವಾಗಿ ನಡೆಯಲಿ ಎಂದು ಇಲ್ಲಿನ ಹಿರೇಮಠದ ಶರಣಬಸವ ಶಿವಾಚಾರ್ಯರು ನುಡಿದರು.

ಅವರು ಭಾನುವಾರ ಇಲ್ಲಿನ ಕಾಡಸಿದ್ಧೇಶ್ವರ ದೇವಸ್ಥಾನದ ಆವರಣದಲ್ಲಿ ಕಾಡಸಿದ್ಧೇಶ್ವರ ಪ್ರಸಾದ ನಿಲಯದ ಭವನದ ಕಟ್ಟಡ ಕಾಮಗಾರಿಗೆ ಪೂಜೆ ನೆರವೇರಿಸಿ ಮಾತನಾಡಿದರು.

ನಗರದ ಮಂಗಳವಾರ ಪೇಟೆಯ ದೈವ ಮಂಡಳಿಯ ಕಾರ್ಯಾಧ್ಯಕ್ಷ ಶ್ರೀಶೈಲ ಧಬಾಡಿ ಮಾತನಾಡಿ, ಅಂದಾಜು ರೂ. 25 ಲಕ್ಷ ವೆಚ್ಚದಲ್ಲಿ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ.

ಪ್ರಸಾದ ಭವನದ ನಿರ್ಮಾಣದಿಂದ ಜಾತ್ರೆ, ಉತ್ಸವ, ಅಮವಾಸ್ಯೆ ಮತ್ತು ಪ್ರತಿ ಸೋಮವಾರ ಸಂಜೆ ನಡೆಯುವ ಪ್ರಸಾದ ಸೇವೆಗೆ ಅನುಕೂಲವಾಗಲಿದೆ ಎಂದರು. ಈ ಸಂದರ್ಭದಲ್ಲಿ ಶ್ರೀಪಾದ ಬಾಣಕಾರ, ದಾನಪ್ಪ ಹುಲಜತ್ತಿ, ಭೀಮಸಿ ಮಗದುಮ್, ಪಂಡಿತ ಪಟ್ಟಣ, ಶಿವಾನಂದ ಕುಳ್ಳಿ ಶಂಕರ ಬಾಡಗಿ, ಶ್ರೀಶೈಲ ಮಠಪತಿ, ಮಹಾದೇವಿ ಮಿರ್ಜಿ, ಈರಪ್ಪ ಕೊಣ್ಣೂರ ಸೇರಿದಂತೆ ಇನ್ನೂ ಅನೇಕರು ಪಾಲ್ಗೊಂಡಿದ್ದರು.

# ಹಿಪ್ಪರಗಿ ಬ್ಯಾರೇಜ್ ಒಳಹರಿವು 32,205 ಕ್ಯೂಸೆಕ್ ದಾಖಲೆ



**ರಬಕವಿ-ಬನಹಟ್ಟಿ :** ಮಹಾರಾಷ್ಟ್ರದ ವಿವಿಧ ಜಲಾಶಯಗಳಿಂದ ಕೃಷ್ಣಾ ನದಿಗೆ ಅಪಾರ ಪ್ರಮಾಣದ ನೀರು ಹರಿದು ಬರುತ್ತಿದ್ದು, ಬುಧವಾರ ಬೆಳಿಗ್ಗೆ ಹಿಪ್ಪರಗಿ ಬ್ಯಾರೇಜ್ಗೆ 32,205 ಕ್ಯೂಸೆಕ್ ಒಳ ಹರಿವು ಇದ್ದು, ಹೊರ ಹರಿವು ಕೂಡಾ ಅಷ್ಟೆ ಪ್ರಮಾಣದಲ್ಲಿದೆ. ಆರು ಟಿಎಂಸಿ ನೀರಿನ ಸಂಗ್ರಹ ಸಾಮರ್ಥ್ಯವಿರುವ ಬ್ಯಾರೇಜಿನಲ್ಲಿ ಸಧ್ಯ 3.23 ಟಿಎಂಸಿಯಷ್ಟು ನೀರಿನ ಸಂಗ್ರಹವಿದೆ.

524 ಮೀಟರ್ ನೀರಿನ ಮಟ್ಟವಿದೆ. ಒಳಹರಿವಿನ ನೀರಿನ ಪ್ರಮಾಣ ಮತ್ತಷ್ಟು ಹೆಚ್ಚಾಗಲಿರುವ ಕಾರಣ 22 ಗೇಟ್ಗಳನ್ನು ಹೊಂದಿರುವ ಬ್ಯಾರೇಜ್ನಿಂದ ಹತ್ತು ಗೇಟ್ಗಳ ಮೂಲಕ ನೀರು ಹೊರಕ್ಕೆ ಬಿಡಲಾಗುತ್ತಿದೆ.

**ದಾಖಲೆ ಒಳಹರಿವು :**

ಕಳೆದೊಂದು ದಶಕದಲ್ಲಿಯೇ ಮೇ ಕೊನೆಯ ವಾರದಲ್ಲಿ ಇಷ್ಟೊಂದು ಪ್ರಮಾಣದಲ್ಲಿ ಮಹಾರಾಷ್ಟ್ರದಿಂದ ನೀರು ಹರಿದು ಬಂದಿರುವದು ದಾಖಲೆಯಾಗಿದೆ.

ಸಾಮಾನ್ಯವಾಗಿ ಜೂನ್ ಕೊನೆಯ ವಾರದಲ್ಲಿ ಈ ಪ್ರಮಾಣದ ನೀರು ಹರಿದು ಬರುತ್ತಿತ್ತು.

ಆದರೀಗ ಜೂನ್ ತಿಂಗಳಿಗಿಂತ ಮುಂಚೆಯೇ ಹರಿದು ಬರುವ ನೀರಿನ ಪ್ರಮಾಣದಲ್ಲಿ ಏರಿಕೆಯಾಗುತ್ತಿದ್ದು, ಬೆಳೆ ನಿರೀಕ್ಷೆಯಲ್ಲಿದ್ದ ನದಿ ತಟದಲ್ಲಿನ ರೈತರ ಬೆಳೆ ನೀರಿನಲ್ಲಿ ಮುಳುಗಿ ಹೋಗಿ ಅಪಾರ ಪ್ರಮಾಣದ ಬೆಳೆ ಕೈ ಸೇರುವ ಮುನ್ನವೇ ನೀರು ಪಾಲಾಗಿದೆ.

# ಆತ್ಮಹತ್ಯೆ ಮಾಡಿಕೊಂಡ ನೇಕಾರ ಕುಟುಂಬಕ್ಕೆ ನೆರವಾದ ವಧು-ವರ



**ರಬಕವಿ-ಬನಹಟ್ಟಿ :** ಸಪ್ತಪದಿ ತುಳಿಯುವ ಸಂದರ್ಭದಲ್ಲಿ ಮದುವೆ ಮನೆಯ ಸಂಭ್ರಮ. ನೂರಾರು ಸಂಬಂಧಿಕರ ಸಂತಸದ ಮಧ್ಯೆ, ಈಚೆಗೆ ಆರ್ಥಿಕ ಸಂಕಷ್ಟದಿಂದ ಆತ್ಮಹತ್ಯೆ ಮಾಡಿಕೊಂಡ ಸಂಗಮೇಶ ಮುರಗೋಡ ಕುಟುಂಬಕ್ಕೆ ಇಲ್ಲೊಂದು ಮದುವೆ ಮಂಟಪದಲ್ಲಿಯ ವಧು ವರರು ಸಹಾಯ ಮಾಡುವ ಮೂಲಕ ಮಾನವೀಯತೆ ಮೆರೆಯುವಲ್ಲಿ ಕಾರಣವಾಯಿತು. ಬನಹಟ್ಟಿಯ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ, ಬಿಜೆಪಿ ಪಕ್ಷದ ಕಾರ್ಯಕರ್ತ ರುದ್ರಪ್ಪ ಮಾಲಾಪುರ ಹಾಗು ಬೆಳಗಲಿ ಕುಟುಂಬದ ಮಕ್ಕಳ ಮದುವೆ ಸಮಾರಂಭ ಇತ್ತೀಚೆಗೆ ಜರುಗಿತು. ಆತ್ಮಹತ್ಯೆ ಮಾಡಿಕೊಂಡ ಕುಟುಂಬಕ್ಕೆ ಐದು ಸಾವಿರ ರೂ.ಗಳಷ್ಟು ಆರ್ಥಿಕ ಸಹಾಯ ಮಾಡುವ ಮೂಲಕ ಸಂಕಷ್ಟದ ಕುಟುಂಬಕ್ಕೆ ನೆರವಾಗಿ ನಿಮ್ಮೊಂದಿಗೆ ನಾವಿದ್ದೇವೆಂಬ ಸಂದೇಶದ ಮೂಲಕ ಇತರರಿಗೂ ಮದುವೆ ಸಮಾರಂಭಗಳಿಗೆ ಮಾದರಿಯಾಗುವಲ್ಲಿ ಕಾರಣವಾಯಿತು.

ಲಕ್ಷಾಂತರ ರೂ.ಗಳ ದುಂದು ವೆಚ್ಚದಲ್ಲಿ ನಡೆಯುತ್ತಿರುವ ಮದುವೆ ಸಮಾರಂಭಗಳಲ್ಲಿ ಇಂತಹ ಮಾನವೀಯ ಕಳಕಳಿಯ ಕಾರ್ಯಕ್ರಮಗಳು ನಡೆದಲ್ಲಿ ಸಮಾಜದಲ್ಲಿ ಸಂಕಷ್ಟಕ್ಕೀಡಾದ ಕುಟುಂಬಗಳಿಗೆ ನೆರವಾಗುವ ಮೂಲಕ ಇತರರಿಗೆ ಇದು ಪ್ರೇರಣೆಯಾಗಲಿದೆ.

# ಜಿಲ್ಲಾಧಿಕಾರಿಗಳಿಂದ ಒಳ ಮೀಸಲಾತಿ ಗಣತಿ ಪರಿಶೀಲನೆ



**ಜಮಖಂಡಿ :** ನಗರದ ವಿವಿಧ ವಾರ್ಡಗಳಲ್ಲಿ ಜಿಲ್ಲಾಧಿಕಾರಿ ಕೆ. ಎಂ. ಜಾನಕಿ ಅವರು ಒಳ ಮೀಸಲಾತಿ ವರ್ಗೀಕರಣ ಜನಗಣತಿ ವೇಗವನ್ನು ಪರಿಶೀಲಿಸಿದರು.

ನಗರದ ಟೀಚರ್ಸ ಕಾಲನಿ, ಮಹಾಲಿಂಗೇಶ್ವರ ಕಾಲನಿ, ರೆಹಮತ ನಗರ ಬಡಾವಣೆಗಳಿಗೆ ಭೇಟಿ ನೀಡಿದ ಅವರು, ಖುದ್ದಾಗಿ ನಿವಾಸಿಗಳ ಮನೆ ಮನೆಗಳಿಗೆ ತೆರಳಿ ಗಣತಿ ಕಾರ್ಯಕ್ಕೆ ಸಿಬ್ಬಂದಿಗಳು ಬಂದಿರುವ ಬಗ್ಗೆ ಮಾಹಿತಿ ಪಡೆದು ಕೊಂಡರು. ಒಳ ಮೀಸಲಾತಿಗಾಗಿ ಜಾತಿ ಗಣತಿ ನಡೆಯುತ್ತಿದ್ದು, ಯಾರೊಬ್ಬರೂ ಅದರಿಂದ ವಂಚಿತರಾಗಬಾರದು.

ಗಣತಿ ಮಾಡುವ ಸಿಬ್ಬಂದಿಗಳು ಹಾಗೂ ಮೇಲ್ವಿಚಾರಕರು ಕೈಗೊಂಡಿರುವ ಕ್ರಮಗಳ ಬಗ್ಗೆ ಖುದ್ದಾಗಿ ಪರಿಶೀಲನೆ ನಡೆಸಿದರು. ಗಣತಿ ಕಾರ್ಯದಲ್ಲಿ ಆಧಾರ ಕಾರ್ಡ ಇಲ್ಲದವರು, ಶಾಲಾಮಕ್ಕಳು ಉಳಿದು ಬಿಡುತ್ತಾರೆ ಎಂಬ ದೂರುಗಳು ಕೇಳಿ ಬಂದಿರುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳು ಪರಿಶೀಲಿಸಿ ಮಾಹಿತಿ ಪಡೆದರು. ಕಂದಾಯ ಉಪ ವಿಭಾಗಾಧಿಕಾರಿ ಶ್ವೇತಾ ಬೀಡಿಕರ, ತಹಸೀಲ್ದಾರ ಸದಾಶಿವ ಮಕ್ಕೊಜಿ, ಪೌರಾಯುಕ್ತೆ ಜ್ಯೋತಿ ಗಿರೀಶ, ಸಮಾಜಕಲ್ಯಾಣ ಇಲಾಖೆ ನಿರ್ದೇಶಕ ಜಗದೇವ ಪಾಸೋಡೆ ಸಹಿತ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಜರಿದ್ದರು.

# ಆಲಮಟ್ಟಿ-ಯಾದಗಿರಿ ರೈಲು ಮಾರ್ಗಕ್ಕೆ ಸಂಸದ ರಮೇಶ ಜಿಗಜಿಣಗಿ ಭೇಟಿ



**ಮುದ್ದೇಬಿಹಾಳ :** ಆಲಮಟ್ಟಿ-ಮುದ್ದೇಬಿಹಾಳ-ಯಾದಗಿರ ರೈಲು ಮಾರ್ಗ ಕುರಿತು ಕೇಂದ್ರದ ರೈಲ್ವೆ ಖಾತೆ ರಾಜ್ಯ ಸಚಿವ ವಿ ಸೋಮಣ್ಣ ಅವರು ಇತ್ತೀಚೆಗೆ ಸಮೀಕ್ಷೆ ಮಾಡಲು ಮುಂದಾಗಿರುವುದು ರೈಲು ಮಾರ್ಗಕ್ಕೆ ಹೋರಾಟ ಮಾಡುತ್ತಿರುವ ಹುಣಸಗಿ ತಾಳಿಕೋಟೆ ಸುರಪುರ ಭಾಗದ ಹೋರಾಟಗಾರರ ತಂಡವು ಲೋಕಸಭಾ ಸದಸ್ಯ ರಮೇಶ್ ಜಿಗಜಿಣಗಿ ಅವರನ್ನು ಸ್ವಗೃಹದಲ್ಲಿ ಭೇಟಿಯಾಗಿ ಯೋಜನೆಯನ್ನು ಶೀಘ್ರವಾಗಿ ಕಾರ್ಯಗತಗೊಳಿಸಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕು ಎಂದು ಮನವಿ ಮಾಡಿದರು. ಸ್ವಾತಂತ್ರ್ಯ ಪೂರ್ವದಲ್ಲಿ 1929ರ ಸುಮಾರಿಗೆ ಬ್ರಿಟಿಷ್ ರೈಟ್ ಕಂಪನಿಯ ಉದ್ದೇಶಿತ ಈ ರೈಲು ಮಾರ್ಗ ಹಲವಾರು ಕಾರಣಗಳಿಂದ ನನೆಗುದ್ದಿಗೆ ಬಿದ್ದಿದೆ, ಈ ಭಾಗದ ಜನತೆ ಬಹು ದಿನಗಳಿಂದ ನಿರ್ಮಾಣ ಮಾಡಬೇಕು ಎಂದು ಒತ್ತಾಯಿಸುತ್ತಲೆ ಬಂದಿದ್ದಾರೆ. 1993 ಹಾಗೂ 2004ರಲ್ಲಿ ಯೋಜನೆಯ ಕುರಿತು ಕೇಂದ್ರ ಸರ್ಕಾರ ಸಮೀಕ್ಷೆಯನ್ನು ಮಾಡಲು ಮುಂದಾಗಿತ್ತು ಆದರೂ ರಾಜಕೀಯ ಇಚ್ಛಾಶಕ್ತಿ ಹಾಗೂ ಸ್ಥಳೀಯ ರಾಜಕೀಯ ನಾಯಕರ ಬೆಂಬಲದ ಕೊರತೆಯ ಕಾರಣದಿಂದ ಯೋಜನೆ ಇಲ್ಲಿಯವರೆಗೂ ಜಾರಿಗೆ ಬಂದಿಲ್ಲ. ಕಳೆದ ದಶಕದಲ್ಲಿ ಹತ್ತಾರು ಬಾರಿ ದೆಹಲಿ ಪ್ರವಾಸ, ಪ್ರತಿಭಟನೆಗಳನ್ನು ಮಾಡಿ ಜನತೆ ಈ ಯೋಜನೆ ಜಾರಿ ಮಾಡಲು ಒತ್ತಾಯಿಸುತ್ತಲೆ ಬಂದಿದ್ದಾರೆ. ಈ ಕುರಿತು ರಾಯಚೂರು ಸಂಸದ ಕುಮಾರನಾಯಕ ಅವರು ಕಳೆದ ವರ್ಷ ವಿಶೇಷ ಪ್ರಯತ್ನವನ್ನು ಮಾಡಿ ರೈಲ್ವೆ ಇಲಾಖೆಯಿಂದ ಮತ್ತೊಮ್ಮೆ ಆರ್ಥಿಕ ಮತ್ತು ಸಾಮರ್ಥ್ಯದ ಸಮೀಕ್ಷೆಯನ್ನು ಮಾಡುವ ಒಪ್ಪಿಗೆಯನ್ನು ಪಡೆದಿದ್ದರು. ಈ ಕುರಿತು ಸಂಸದರೊಂದಿಗೆ ಪ್ರಸ್ತಾಪಿಸಿದ ಹೋರಾಟಗಾರರು ಯೋಜನೆಯ ನಿರ್ಮಾಣದಿಂದ ಬೆಳಗಾವಿ,

ಬಾಗಲಕೋಟೆ, ವಿಜಯಪುರ ಮತ್ತು ರಾಯಚೂರು ಭಾಗದ ಉತ್ತರಕರ್ನಾಟಕ ಮತ್ತು ಕಲ್ಯಾಣಕರ್ನಾಟಕದ ಜಿಲ್ಲೆಗಳಿಗೆ ಬಹಳಷ್ಟು ಸಂಪರ್ಕ ಉಪಯೋಗ ಆಗುತ್ತದೆ ಕಾರಣ. ತಾವು ಸಹ ಯೋಜನೆಯ ಕಾರ್ಯಗತಗೊಳಿಸಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕಬೇಕು ಎಂದು ಮನವಿ ಮಾಡಿದರು. ಬಿಜೆಪಿ ಮುಖಂಡರಾದ ಆರ್ ಎಸ್ ಪಾಟೀಲ್ ನಿಯೋಗಕ್ಕೆ ಮಾರ್ಗದರ್ಶನ ಮಾಡಿದರು. ಹೋರಾಟಗಾರರಾದ ಅರವಿಂದ ಲದ್ದಿಮಠ, ಚಂದ್ರಶೇಖರ ದಂಡಿನ, ಆರ್ ವಿ ಜಾಲವಾದಿ. ಕಿರಣ್ ಪಾಟೀಲ, ಬಸನಗೌಡ ಪಾಟೀಲ, ಶಿವನಗೌಡ ಪಾಟೀಲ, ಜಯಪ್ರಕಾಶ ಉಪನಾಳ ಸೇರಿದಂತೆ 40 ಜನರು ಉಪಸ್ಥಿತರಿದ್ದರು. ರಮೇಶ್ ಜಿಗಜಿಣಗಿ ಲೋಕಸಭಾ ಸದಸ್ಯರು, ವಿಜಯಪುರ ಕೇಂದ್ರ ಸರ್ಕಾರವು ಬೃಹತ್ ಯೋಜನೆ, ರೈಲ್ವೆ ಮಾರ್ಗಗಳನ್ನು ನಿರ್ಮಿಸುವುದಕ್ಕೆ ಇತ್ತೀಚೆಗೆ ಹೆಚ್ಚು ಆದ್ಯತೆ ನೀಡುತ್ತಿದೆ. ರೈಲ್ವೆ ಸಚಿವರಾದ ಅಶ್ವಿನ್ ವೈಷ್ಣವ್ ಅವರು ಬಹು ನಿರೀಕ್ಷಿತ ಈ ರೈಲ್ವೆ ಮಾರ್ಗ ಈ ಬಾರಿ ನಿರ್ಮಿಸುತ್ತಾರೆ ಎಂದು ನನ್ನ ನಂಬಿಕೆ. ಇದಕ್ಕಾಗಿ ವಿ ಸೋಮಣ್ಣ ಅವರನ್ನು ಭೇಟಿಯಾಗಿ ಒತ್ತಾಯಿಸುತ್ತೇನೆ.

**ವರದಿ : ಸಚಿನ್ ಚಲವಾದಿ**

# ನಾಡೋಜ ಮಹೇಶ್ ಜೋಶಿಯವರಿಗೆ ಸಚಿವ ಸ್ಥಾನದ ಮಾನ್ಯತೆಯನ್ನು ಮರಳಿ ನೀಡಲು ಆಗ್ರಹ: ಬಿ.ಎಚ್. ಸತೀಸಗೌಡ

**ಬೆಂಗಳೂರು :** ಸಚಿವ ಸ್ಥಾನಮಾನ ನೀಡಿರುವುದು ಸಮಸ್ತ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ ಗೆ ಹೊರತು ವ್ಯಕಿಗಲ್ಲ. ಇದು ಮಹೇಶ್ ಜೋಶಿಯವರಿಗೆ ಮಾಡಿದ ಅವಮಾನವಲ್ಲ, ಕನ್ನಡ ಸಾಹಿತ್ಯ ಪರಿಷತ್ ಗೆ ಮಾಡಿದ ಅವಮಾನ. ಸರ್ಕಾರ ಕೂಡಲೇ ಆದೇಶವನ್ನು ಹಿಂದಕ್ಕೆ ಪಡೆದು ಕಸಾಪ ಅಧ್ಯಕ್ಷರಿಗೆ ನೀಡಲಾಗುತ್ತಿದ್ದ ಸಚಿವ ಸ್ಥಾನಮಾನವನ್ನು ಮುಂದುವರೆಸಬೇಕು ಎಂದು ಅಗ್ರಹಿಸುತ್ತೇನೆ.



# ನಿಗದಿತ ಜಾಗದಲ್ಲಿ 'ಪ್ರಜಾಸೌಧ' ನಿರ್ಮಾಣ ಮಾಡಿ: ರಬಕವಿ ಸಮಸ್ತ ದೈವ ಮಂಡಳಿಯ ಒಕ್ಕೊರಲಿನ ಆಗ್ರಹ



**ರಬಕವಿ :** ಇಲ್ಲಿಯ ವಿರಕ್ತಮಠದಲ್ಲಿ ರಬಕವಿ ದೈವ ಮಂಡಳಿ ವತಿಯಿಂದ ನಗರದ ಹಿರಿಯರು ಈಗಿರುವ ನಿಗದಿತ ಜಾಗದಲ್ಲೇ 'ಪ್ರಜಾಸೌಧ' ಕಟ್ಟಡ ನಿರ್ಮಾಣ ಮಾಡಲು ಆಗ್ರಹಿಸಿದರು.

ರಬಕವಿ ಬನಹಟ್ಟಿ ತಾಲೂಕಿನ ರಬಕವಿ ಗ್ರಾಮದ ಸರ್ವೆ ನಂ. 63/ಬಿ ಕ್ಷೇತ್ರ 22.02 ಪೈಕಿ ಎಂ/ಗು ಜಮೀನಿಗೆ ಮದಲಮಟ್ಟಿ ಗ್ರಾಮದ ಪುನರ್ವಸತಿ ಕೇಂದ್ರದ ನಿರ್ಮಾಣದ ಉದ್ದೇಶಕ್ಕಾಗಿ ತಯಾರಿಸಿರುವ ತಾತ್ಕಾಲಿಕ ವಿನ್ಯಾಸ ನಕ್ಷೆಯಲ್ಲಿ ಕಾಯ್ದಿರಿಸಿದ ನಾಗರಿಕರ ಸೌಲಭ್ಯಕ್ಕಾಗಿ ನಿಗದಿಪಡಿಸಿರುವ ನಿವೇಶನ ನಂ. 298 ಕ್ಷೇತ್ರ 14200.55 ಚದರ ಮೀ ಕ್ಷೇತ್ರದಲ್ಲಿ ತಾಲೂಕು ಆಡಳಿತ ಪ್ರಜಾ ಸೌಧ ಕಟ್ಟಡ ನಿರ್ಮಾಣ ಮಾಡಿದರೆ ಸೂಕ್ತವಾಗುತ್ತದೆ ಎಂದು ಹೇಳಿದರು.

ಬೇರೆ ಬೇರೆ ಕಡೆ ಜಾಗ ಹುಡುಕುತ್ತ ಬೇರೆ ಪ್ರದೇಶದ ಜನತೆಯ ಹಿತ ಕಾಯುವತ್ತ ವೃಥಾ ಕಾಲಹರಣ ಮಾಡದೇ ಈ ಮೊದಲು ಸರ್ಕಾರ ನಿಗದಿ ಮಾಡಿದ ಜಾಗದಲ್ಲಿ 'ಪ್ರಜಾಸೌಧ' ನಿರ್ಮಾಣ ಮಾಡುವುದು ಯೋಗ್ಯ. ಇದರಿಂದ ಸಾರ್ವಜನಿಕರಿಗೆ ತುಂಬಾ ಅನುಕೂಲವಾಗುತ್ತದೆ ಎಂದು ಹೇಳಿದರು.

ರಬಕವಿ ನಗರದ ಸರ್ವೆ ನಂಬರ 63/ಬಿ ಕ್ಷೇತ್ರ 22.02 ಪೈಕಿ ಜಾಗ ಸೂಕ್ತವಾಗಿದ್ದು ಸುಮ್ಮನೆ ಕಾಲಹರಣ ಮಾಡದೇ ಸರ್ವೆ ನಂಬರದಲ್ಲಿನ ಸ್ಥಳದಲ್ಲಿ 'ಪ್ರಜಾಸೌಧ' ನಿರ್ಮಾಣ ಮಾಡಲು ಸೂಕ್ತವಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ರಾಮಣ್ಣ ಹುಲಕುಂದ, ಧರೆಪ್ಪ ಉಳ್ಳಾಗಡ್ಡಿ, ಸಂಜಯ ತೆಗ್ಗಿ, ಶಿವಾನಂದ ಬಾಗಲಕೋಟಮಠ, ಬಸವರಾಜ ತೆಗ್ಗಿ, ಮಹಾದೇವ ದೂಪದಾಳ, ಸಂಜಯ ತೇಲಿ, ಮಲ್ಲೇಶ ಕುಚನೂರ, ರಾಯಪ್ಪ ಹೆಗ್ಗಣ್ಣವರ, ಸದಾಶಿವ ನಾಯಕ, ಡಾ. ರವಿ ಜಮಖಂಡಿ, ಪ್ರಭು ಪೂಜಾರಿ, ಚಿದಾನಂದ ಸೋಲ್ಲಾಪುರ, ನೀಲಕಂಠ ಮುತ್ತೂರು, ವೆಂಕಟೇಶ ಮಮದಾಪುರ, ಚನ್ನಬಸು ಬಿಜಾಪುರ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

# ಖಿದ್ಮಾ ಲೇಖನ ಸ್ಪರ್ಧೆಯ ಫಲಿತಾಂಶ ಪ್ರಕಟ




**ಬೆಂಗಳೂರು :** ಸಂವಿಧಾನ ಶಿಲ್ಪಿ ಬಾಬಾಸಾಹೇಬ ಅಂಬೇಡ್ಕರ್ ಅವರ ಜಯಂತಿಯ ಪ್ರಯುಕ್ತ ಖಿದ್ಮಾ ಫೌಂಡೇಶನ್ ಕರ್ನಾಟಕ ಆಯೋಜಿಸಲಾಗಿದ್ದ ರಾಜ್ಯ ಮಟ್ಟದ ಲೇಖನ ಸ್ಪರ್ಧೆಯ ಫಲಿತಾಂಶ ಪ್ರಕಟಣೆಯಾಗಿದೆ. ಪ್ರಥಮ ಹಿರಿಯ ವೈದ್ಯ ಅಧಿಕಾರಿ ಡಾ. ಸುರೇಶ್ ನೆಗಳಗುಳಿ, ದ್ವಿತೀಯ: ಶ್ರೀಮತಿ ಸ್ವಪ್ನ ಆರ್.ಎ ಹಾಗೂ ತೃತೀಯ ಸ್ಥಾನ ಡಾ. ಪೂರ್ಣಿಮಾ ಧಾಮಣ್ಣವರ ಪಡೆದುಕೊಂಡರೆ ತೀರ್ಪುಗಾರರಿಂದ ಝುಲೇಖ ಮಮ್ತಾಝ್,ಕು.ಜ್ಯೋತಿ ಆನಂದ ತಂದುಕೊಂಡರು, ರೇಣುಖಾ ಬಂಗಾರಪ್ಪನವರ, ಪಲ್ಲವಿ ಎಂ.ಓ ಹಾಗೂ ಪ್ರತಿಭಾ ಬಿ ತಲ್ಲೂರ ಅವರು ಮೆಚ್ಚುಗೆಯನ್ನು ಪಡೆದುಕೊಂಡಿದ್ದಾರೆ. ಲೇಖನ ಸ್ಪರ್ಧೆಗೆ ಹಿರಿಯ ಸಾಹಿತಿಗಳು ಹಾಗೂ ವಕೀಲರಾದ ಬಿ. ಎಸ್. ಅಪರಂಜಿ, ಶಿಕ್ಷಕರು, ಲೇಖಕರಾದ ಮೊಹಮ್ಮದ್ ಹುಮಾಯುನ್ ಎನ್ ಹಾಗೂ ಶಿಕ್ಷಕಿ, ಅಂಕಣ ಬರಹಗಾರರಾದ ಅಶ್ವಿನಿ ಎಸ್ ಅಂಗಡಿ ಬಾದಾಮಿ ತೀರ್ಪುಗಾರರಾಗಿ ಕಾರ್ಯನಿರ್ವಹಿಸಿದರು.

ಶನಿವಾರ ಸಂಜೆ ಗೂಗಲ್ ಮೀಟ್ ಮೂಲಕ ನಡೆದ ಫಲಿತಾಂಶ ಪ್ರಕಟಣಾ ಕಾರ್ಯಕ್ರಮದಲ್ಲಿ ಯುವ ಲೇಖಕ ಮೆಹಬೂಬ ಸಾಹೇಬ. ವೈ. ಜೆ ಖಿದ್ಮಾ ಫೌಂಡೇಶನ್ ಅಧ್ಯಕ್ಷ ಆಮಿರ್ ಅಶ್ಅರೀ ಬನ್ನೂರು, ಯುವ ಲೇಖಕಿ ಕುಮಾರಿ ಅಮರಲತಾ ಬೆಂಗಳೂರು ಭಾಗವಹಿಸಿದ್ದರು ಎಂದು ಖಿದ್ಮಾ ಫೌಂಡೇಶನ್ ಪ್ರಧಾನ ಕಾರ್ಯದರ್ಶಿ ಅಮಿತಾ ಅಶೋಕ್ ಪ್ರಸಾದ್ ಬೆಂಗಳೂರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಾಂಗ್ರೆಸ್ ಕಚೇರಿಯಲ್ಲಿ ನೆಹರು ಪುಣ್ಯತಿಥಿ




**ವಿಜಯಪುರ:**ಮಾಜಿಪ್ರಧಾನಿಪಂಡಿತ ಜವಾಹರಲಾಲ ನೆಹರು ಅವರ ಪುಣ್ಯತಿಥಿಯನ್ನು ನಗರದ ಕಾಂಗ್ರೆಸ್ ಪಕ್ಷದ ಕಾರ್ಯಾಲಯದಲ್ಲಿ ಮಂಗಳವಾರ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ವೈಜನಾಥ ಕರ್ಪೂರಮಠ ಮಾತನಾಡಿ, ನವಭಾರತ ನಿರ್ಮಾಣವನ್ನು ನಿರ್ಮಿಸಲು ಅಡಿಗಲ್ಲು ಹಾಕಿ, ದೇಶದ ಭದ್ರ ಬುನಾದಿಗಾಗಿ ಅಡಿಪಾಯ ಹಾಕಿದ ಸಾಕಾರ ಮೂರ್ತಿ ಆಗಿದ್ದರು. ಅನಕ್ಷರಸ್ಥರನ್ನು ಅಕ್ಷರಸ್ತರನ್ನಾಗಿ ಮಾಡಲು ಶಿಕ್ಷಣದ ವ್ಯವಸ್ಥೆಗೆ ಬಲವನ್ನು ನೀಡಲು ಭಾರತದಲ್ಲಿ ಹಲವಾರು, ಸಾವಿರಾರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಮುನ್ನುಡಿ ಬರೆದು ಸಾಕ್ಷರತೆಯಲ್ಲಿ ಮೈಲಿಗಲ್ಲು ನಿರ್ಮಾಣ ನಿರ್ಮಾಣ ಮಾಡಿ ಧೀಮಂತ ನಾಯಕ ಎನಿಸಿಕೊಂಡಿದ್ದರು.

ಭಾರತದಾದ್ಯಂತ ಹಲವಾರು ಆಸ್ಪತ್ರೆಗಳನ್ನು ಕಟ್ಟಲು ಆಜ್ಞೆ ಮಾಡಿದ ವೈದ್ಯಲೋಕದ ರಾಯಭಾರಿ, ಹಲವಾರು ನದಿ, ಸೇತುವೆಗಳನ್ನು ಕಟ್ಟಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿದ ನೀರಾವರಿಯ ತಜ್ಞ, ವಿಜ್ಞಾನಿಗಳ ಸಾಧನೆಯನ್ನು ಮನಗಂಡು ಇಸ್ರೋ ಬಾಹ್ಯಾಕಾಶ ಸಂಸ್ಥೆಯನ್ನು ಸೃಷ್ಟಿಸಿದ ವಿಜ್ಞಾನಿಗಳ ಅಚ್ಚುಮೆಚ್ಚಿನ ನಾಯಕ, ಸರ್ವಜನಾಂಗದ ಶಾಂತಿಯ ತೋಟದ ಪರಿಪಾಲಕ, ಸಾವಿರಾರು ಕಿಲೋಮೀಟ–ರ್ ರಸ್ತೆಗಳನ್ನು ನಿರ್ಮಿಸಲು ಶಂಕು ಸ್ಥಾಪನೆ ಮಾಡಿದ ಪ್ರಜಾಸೇವಕ ಭಾರತದ ಮೊಟ್ಟ ಮೊದಲ ಪ್ರಧಾನಿಯಾಗಿ ಜಗತ್ಪ್ರಸಿದ್ದರಾಗಿದ್ದರು ಎಂದು ಗುಣಗಾನ ಮಾಡಿದರು.

ಈ ಸಂದರ್ಭದಲ್ಲಿ ಕೆಪಿಸಿಸಿ ಉಪಾಧ್ಯಕ್ಷ ಕೆ. ಎಫ್. ಅಂಕಲಗಿ ವಕೀಲರು, ಡಿ. ಎಲ್. ಚವ್ಹಾಣ, ಗಂಗಾಧರ ಸಂಬಣ್ಣಿ, ಪ್ರಧಾನ ಕಾರ್ಯದರ್ಶಿಗಳಾದ ಎಂ. ಎಂ. ಮುಲ್ಲಾ (ದ್ಯಾಬೇರಿ), ವಸಂತ ಹೊನಮೋಡೆ, ದೇಸು ಚವ್ಹಾಣ, ಬ್ಲಾಕ್ ಅಧ್ಯಕ್ಷರುಗಳಾದ ಜಮೀರಹ್ಮದ ಬಕ್ಷಿ, ಆರತಿ ಶಾಹಪೂರ, ಅಶ್ಫಾಕ ಮನಗೂಳಿ, ಮಹ್ಮದ ಮುಲ್ಲಾ, ಸಂತೋಷ ಬಾಲಗಾವಿ, ತಾಜುದ್ದೀನ ಖಲೀಫಾ, ಎಂ. ಬಿ. ನಾಯಿಕ, ಸರಫರಾಜ ಮಿರ್ಜಿ, ಶಬೀಹಾ ಮಂಟೂರ, ಮಹಿಬೂಬ ಕರ್ಜಗಿ, ದಿಲಿಪ ಪ್ರಭಾಕರ ಹಾಗೂ ಇತರ ಕಾರ್ಯಕರ್ತರು ಉಪಸ್ಥಿತರಿದ್ದರು.

# ಕನಕ ಪಬ್ಲಿಕ್ ಶಾಲೆಯಲ್ಲಿ ಮೌಲ್ಯಾಧಾರಿತ ಶಿಕ್ಷಣ: ಕುರಿಯವರ



**ವಿಜಯಪುರ :** ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಬಾಳಿನ ಆಶಾಕಿರಣ ಕನಕ ಪಬ್ಲಿಕ್ ಶಾಲೆ, ಕೇವಲ ಒಂದು ವರ್ಷದಲ್ಲಿಯೇ ಶಿಕ್ಷಣ ಕ್ಷೇತ್ರದಲ್ಲಿ ವಿಶಿಷ್ಟ ಸಾಧನೆಗೈದಿದೆ. ಗುಣಮಟ್ಟದ ಶಿಕ್ಷಣ ಹಾಗೂ ಮೌಲ್ಯಾಧಾ–ರಿತ ಶಿಕ್ಷಣಕ್ಕೆ ಕನಕ ಪಬ್ಲಿಕ್ ಶಾಲೆ ಹೆಸರುವಾಸಿಯಾಗಿದೆ ಎಂದು ಮಹಾನಗರ ಪಾಲಿಕೆಯ ಸದಸ್ಯ ರಾಜಶೇಖರ ಕುರಿಯವರು ಹೇಳಿದರು.

ಮಂಗಳವಾರ ನಗರದ ವೀರಶೈವ ಲಿಂಗಾಯತ ಸಭಾ ಭವನದಲ್ಲಿ ಕರ್ನಾಟಕ ಕನಕದಾಸ ಶಿಕ್ಷಣ ಸಂಸ್ಥೆಯ ಕನಕ ಪಬ್ಲಿಕ್ ಶಾಲೆ ಹಾಗೂ ಕನಕ ನವೋದಯ ಕೋಚಿಂಗ್ ಸ್ಕೂಲ್ ವತಿಯಿಂದ ಹಮ್ಮಿಕೊಂಡ ಬೇಸಿಗೆ ಶಿಬಿರದ ವಿಶೇಷ ಕ್ಲಾಸ್‌ಗಳ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಖ್ಯಾತ ಶಿಕ್ಷಣ ತಜ್ಞರನ್ನು ಒಳಗೊಂಡ ಕನಕ ಪಬ್ಲಿಕ್ ಶಾಲೆ ಶಿಕ್ಷಣ ಕ್ಷೇತ್ರದಲ್ಲಿ ಫಿನಿಕ್ಸ್ ಹಕ್ಕಿಯಂತೆ ಹಾರಿಬಂದು ಹೊಸ ಸಂಚಲನ ಮೂಡಿಸಿದೆ ಎಂದು ಹೇಳಿದರು.

ಸಾಹಿತಿ ಪ್ರೊ. ಎ. ಎಚ್. ಕೊಳಮಲಿ ಪ್ರಾಸ್ತಾವಿಕವಾಗಿ ಮಾತನಾಡಿ, ಪ್ರಥಮ ವರ್ಷದಲ್ಲಿಯೇ ಮುರಾರ್ಜಿ, ಆದರ್ಶ ವಿದ್ಯಾಲಯದ ಶಾಲೆಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವುದರ ಮೂಲಕ ಅತ್ಯುನ್ನತ ಸಾಧನೆಯನ್ನು ನಮ್ಮ ಸಂಸ್ಥೆ ಮಾಡಿದೆ. ಕಡಿಮೆ ಶುಲ್ಕದಲ್ಲಿ ಗುಣಮಟ್ಟದ ಶಿಕ್ಷಣವನ್ನು ನೀಡುವ ರಾಜ್ಯದಲ್ಲಿಯೇ ಏಕೈಕ ಶಿಕ್ಷಣ ಸಂಸ್ಥೆ ಕರ್ನಾಟಕ ಕನಕದಾಸ ಶಿಕ್ಷಣ ಸಂಸ್ಥೆ ಎಂದು ಹೇಳಿದರು

ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷ ವಿ. ಸಿ. ನಾಗಠಾಣ ಮಾತನಾಡಿ, ಗುರುಕುಲ ಶಿಕ್ಷಣ ಪದ್ಧತಿ ಮರು ಕಳಿಸಬೇಕು.

ಶಿಕ್ಷಣ ಸಂಸ್ಥೆಗಳು ವ್ಯಾಪಾ–ರೀಕರಣವಾಗದೆ ಮೌಲ್ಯಾಧಾ–ರಿತ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಬೇಕಾಗಿದೆ ಎಂದು ಹೇಳಿದರು.

ಶಿಕ್ಷಕ ಆರ್. ಎಸ್. ಪಟ್ಟಣಶೆಟ್ಟಿ ಮಾತನಾಡಿ, ವಿದ್ಯಾರ್ಥಿಗಳು ಶ್ರದ್ಧೆ, ಪ್ರಾಮಾಣಿಕತೆ, ಏಕಾಗ್ರತೆಯಿಂದ ಓದಿದರೆ ಯಶಸ್ಸು ಶತಸಿದ್ಧ ಎಂದರು.

ಸಂಸ್ಥೆಯ ಅಧ್ಯಕ್ಷ ಜಯಪ್ರಭು ಕೊಳಮಲಿ ಮಾತನಾಡಿ, ವಿದ್ಯಾರ್ಥಿ ಜೀವನ ತಪಸ್ಸು ಇದ್ದಂತೆ. ಸತತ ಅಧ್ಯಯನ ಮಾಡಿದರೆ ಗುರಿ ಮುಟ್ಟಲು ಸಾಧ್ಯ, ಅಧ್ಯಯನದ ಜೊತೆಗೆ ಒಳ್ಳೆಯ ಸಂಸ್ಕಾರವನ್ನು ಹೊಂದಬೇಕು ಎಂದು ಹೇಳಿದರು.

ವಿಠ್ಠಲ ಮಾನೆ, ಪಾಟಲು ಕರಾಡೆ, ಸಿದ್ದಪ್ಪ ಪೂಜಾರಿ, ಗಣಪತಿ ಒಡೆಯರ್, ಬಾಜಿರಾಯ ಕಾರಡೆ, ಸಂಗಮೇಶ ಕೊಳಮಲಿ, ಬಸವರಾಜ ಪಟೇಲ್, ಸಂಸ್ಥೆಯ ನಿರ್ದೇಶಕರಾದ ರಾಮಸ್ವಾಮಿ ಕೊಳಮಲಿ, ಸರಸ್ವತಿ ಕೊಳಮಲಿ, ರಾಜಶ್ರೀ ಕೊಳಮಲಿ ಉಪಸ್ಥಿತ–ರಿದ್ದರು.

# ಶೀಘ್ರದಲ್ಲೇ ಬಾಲಕರ ಸ್ಟೂಡಿಯೋ ಸ್ಥಾಪನೆ: ಬಬಲೇಶ್ವರ



**ವಿಜಯಪುರ :** ಮಕ್ಕಳ ಪ್ರತಿಭೆ ಅನಾವರಣಗೊಳಿಸಲು ರಾಜ್ಯದಲ್ಲಿ ಮಕ್ಕಳ ಸ್ಟುಡಿಯೋ ಸ್ಥಾಪಿಸಲಾಗುವುದು ಎಂದು ರಾಜ್ಯ ಬಾಲಕರ ಅಕಾಡೆಮಿಯ ಅಧ್ಯಕ್ಷ ಸಂಗಮೇಶ್ವರ ಬಬಲೇಶ್ವರ ಅವರು ಹೇಳಿದರು.

ಜಲನಗರದಲ್ಲಿ ಸೋಮವಾರ ಭೃಂಗಿಮಠ ಫೌಂಡೇಶನನಿಂದ ಆಯೋಜಿಸಿದ ಸನ್ಮಾನ ಸ್ವೀಕರಿಸಿ ಮಾತನಾಡುತ್ತಿದ್ದರು.

ಮಕ್ಕಳಲ್ಲಿರುವ ಪ್ರತಿಭೆ ಹೊರತರಲು ಸ್ಟುಡಿಯೋ ಅಗತ್ಯವಿದ್ದು, ಭವಿಷ್ಯದ ಜವಾಬ್ದಾರಿಯುತ ನಾಗ–ರಿಕರಾಗಲಿರುವ ಮಕ್ಕಳ ಪ್ರತಿಭೆ ಪರಿಚಯಕ್ಕೆ ರಾಜ್ಯದ ವಿವಿಧ ಕ್ಷೇತ್ರಗಳಲ್ಲಿ ತಜ್ಞರ, ಸಾಹಿತಿಗಳ ಹಾಗೂ ಮಕ್ಕಳ ಕಲ್ಯಾಣ ಚಿಂತಿಸುವವರ ಸಲಹೆಯಂತೆ ಸ್ಟುಡಿಯೋ ಸ್ಥಾಪನೆಗೆ ಅಗತ್ಯವಾದ ವಿಚಾರ ಮಾಡಲಾಗಿದ್ದು ಶೀಘ್ರವೇ ರಾಷ್ಟ್ರವೇ ಗಮನಿಸುವಂತಹ ಕೆಲಸ ನಮ್ಮ ಬಾಲವಿಕಾಸ ಅಕಾಡೆಮಿಯಿಂದ ಮಾಡಲಾಗುವುದು ಎಂದು ಬಬಲೇಶ್ವರ ತಿಳಿಸಿದರು.

ಭೃಂಗಿಮಠ ಅವರ ಸುಧೀರ್ಘ ಸೇವೆಯನ್ನು ಬಣ್ಣಿಸಿದ ಬಬಲೇಶ್ವರ ತಮ್ಮ ಜೊತೆಗಿನ ಭೃಂಗಿಮಠರ ಸ್ನೇಹಪರತೆ, ಸಲಹೆಯನ್ನು ನೆನಪಿಸಿ ,ನಾಡಿನಾದ್ಯಂತ ಭೃಂಗಿಮಠರ ಸೇವೆಗೆ ಶ್ಲಾಘಿಸಿದ ಅವರು ಭೃಂಗಿಮಠರ ವಕಾಲತ್ತು ಸೇವೆ ಅದ್ಭುತ ಎಂದರು.

ಅಹಿಂದ ನಾಯಕ ಸೋಮನಾಥ ಕಳ್ಳಿಮನಿ ಅವರು ಮಾತನಾಡಿ, ಬಬಲೇಶ್ವರ ಅವರಿಂದ ಕ್ರಿಯಾತ್ಮಕ ಕಾರ್ಯಗಳು ನಡೆಯುತ್ತಿರುವುದು ಸಂತೋಷದ ಸಂಗತಿಯಾಗಿದೆ. ಇವರಿಂದ ಬಾಲಕರ ಕಲ್ಯಾಣ ಯೋಜನೆಗಳು ಇನ್ನಷ್ಟು ಜಾರಿಯಾಗಲಿ ಎಂಬ ಆಶಯ ವ್ಯಕ್ತಪಡಿಸಿದರು.

ಹಿರಿಯ ವಕೀಲ, ಸಾಹಿತಿ ಮಲ್ಲಿಕಾರ್ಜುನ ಭೃಂಗಿಮಠ ಅವರು ಮಾತನಾಡಿ, ಮಕ್ಕಳ ಕಲ್ಯಾಣ–ಕ್ಕಾಗಿ ಸ್ಥಾಪಿಸಲಾದ ಅಕಾಡೆಮಿಗೆ ಸಂಗಮೇಶ್ವರ ಬಬಲೇಶ್ವರ ಅವರಿಗೆ ನೇಮಿಸಿದ್ದು ಸೂಕ್ತ ಮತ್ತು ಅರ್ಹತೆಗೆ ನೀಡಿದ ಹುದ್ದೆಯಾಗಿದ್ದು ಇವರು ಮಕ್ಕಳ ಕಲ್ಯಾಣಪರ ಕ್ರಿಯಾತ್ಮಕ ಯೋಜನೆ ಮತ್ತು ಯೋಚನೆ ಮಾಡುತ್ತಿರುವುದು ಸ್ವಾಗತಕರವಾಗಿದೆ. ಮಕ್ಕಳ ಹಕ್ಕುಗಳನ್ನು ರಕ್ಷಿಸುವಲ್ಲಿ ಅಕಾಡೆಮಿ ಪಾತ್ರ ಮಹತ್ವದ್ದಾಗಿದೆ ,ರಾಜ್ಯದಾದ್ಯಂತ ವಿಶೇಷ. ಕಾರ್ಯಕ್ರಮಗಳ ಮೂಲಕ ಅಕಾಡೆಮಿ ಇನ್ನು ಉತ್ತಮ ಸೇವೆ ಮಾಡಲಿ ಎಂದರು

ಬಾಲಕರ ಅಕಾಡೆಮಿ ಅಧ್ಯಕ್ಷರಾದ ಸಂಗಮೇಶ ಬಬಲೇಶ್ವರ ಅವರಿಗೆ ಬಾಲಕ ಖುಷೀಲ್ ಭೃಂಗಿಮಠ ಶಾಲು ಹೊದಿಸಿ ಸನ್ಮಾನಿಸಿದರು.ಜಗನಾಥ ಯಾತಗೀರಿ ಇತರರು ಇದ್ದರು.

# ಇಂದಿರಾ ಕ್ಯಾಂಟೀನ ಸೇವೆ ಪಕ್ಷಾತೀತ ಜಾತ್ಯಾತೀತ: ನಾಡಗೌಡ

**ತಾಳಿಕೋಟೆ :** ಯಾವುದೇ ಒಂದು ಕಾರ್ಯದಲ್ಲಿ ಯಶಸ್ವಿ ಕಾಣಬೇಕಾದರೇ ಜಾತ್ಯಾತೀತವಾಗಿ ಹಾಗೂ ಪಕ್ಷಾತೀತವಾಗಿ ನಡೆದುಕೊಳ್ಳುವುದು ಅಗತ್ಯವಾಗಿದೆ ಅಂತಹ ನಿಟ್ಟಿನಲ್ಲಿ ಮುಂದುವರೆಯುವುದರೊಂದಿಗೆ ಇಡೀ ರಾಜ್ಯದಲ್ಲಿಯೇ ಇನ್ನೂ 130 ಇಂದಿರಾ ಕ್ಯಾಂಟೀನಗಳನ್ನು ಹೊಸದಾಗಿ ಪ್ರಾರಂಭಿಸಲು ಈಗಿನ ಸರ್ಕಾರ ಯೋಚಿಸಿದೆ ಇದರಿಂದ ಬಡಬಗ್ಗರಿಗೆ ಬಹಳೇ ಅನುಕೂಲವಾಗಲಿದೆ– ಎಂದು ಮುದ್ದೇಬಿಹಾಳ ಮತಕ್ಷೇತ್ರದ ಶಾಸಕರಾದ ಸಿ.ಎಸ್.ನಾಡಗೌಡ (ಅಪ್ಪಾಜಿ) ಅವರು ನುಡಿದರು.

ಮಂಗಳವಾರರಂದು ಕರ್ನಾಟಕ ಸರ್ಕಾರದ ಮಹತ್ವಾಂಕಾಶೆಯ ಯೋಜನೆಯಡಿಯಲ್ಲಿ ನಿರ್ಮಿಸಿ ಪಟ್ಟಣದಲ್ಲಿ ಪ್ರಾರಂಭಿಸಲಾದ ನೂತನ ಇಂದಿರಾ ಕ್ಯಾಂಟಿನಲ್ಲಿ ಶ್ರೀ ಅನ್ನಪೂರ್ಣೇಶ್ವರಿ ಹಾಗೂ ಶ್ರೀ ಮಹಾಲಕ್ಷಿ ?ಮೀ ದೇವಿಗೆ ಪುಷ್ಪಹಾರ ಹಾಕಿ ಗೌರವಿಸಿ ಮಾತನಾಡುತ್ತಿದ್ದ ಅವರು ಮುದ್ದೇಬಿಹಾಳ ಮತಕ್ಷೇತ್ರಗಳಲ್ಲಿ ಇಗ 3 ಕ್ಯಾಂಟಿನ್ಗಳನ್ನು ಇಂದು ಉದ್ಘಾಟಿಸಲಾಗುತ್ತಿದೆ ಅವುಗಳಲ್ಲಿ ಮುದ್ದೇಬಿಹಾಳ, ನಾಲವತವಾಡ ಹಾಗೂ ತಾಳಿಕೋಟೆ ಒಳಗೊಂಡಿದೆ ಎಂದರು. ಬಡ ಜನತೆ ಉಪವಾಸ ದುಡಿಯುವ ಕಾರ್ಯವಾಗಬಾರದು ಎಂಬ ಉದ್ದೇಶದಿಂದಲೇ ಇಂದಿರಾ ಕ್ಯಾಂಟಿನನ್ನು ಸರ್ಕಾರ ಅಲ್ಲಲ್ಲಿ ನಿರ್ಮಾಣಕಾರ್ಯ ನಡೆಸಿದೆ ಇವುಗಳಲ್ಲದೆ ಮತಕ್ಷೇತ್ರದಲ್ಲಿ ಇನ್ನು ಕೇಲವು ಸ್ಥಳಗಳಲ್ಲಿ ಅಗತ್ಯಬಿದ್ದರೇ ಅಲ್ಲಿಯೂ ಪ್ರಾರಂಭಿಸಲಾಗುವುದೆಂದರು.

ಈ ಹಿಂದೆಯೂ ಸಿದ್ದರಾಮಯ್ಯನವರ ಸರ್ಕಾರವಿದ್ದಾಗಲೂ ಈ ಇಂದಿರಾ ಕ್ಯಾಂಟಿನನ್ನು ರಾಜ್ಯದಲ್ಲಿ ಪ್ರಾರಂಭಿಸಲಾಗಿ–ತ್ತು ಪುನಃ ಅನ್ಯ ಇನ್ನೊಂದು ಸರ್ಕಾರ ರಚನರಯಾದಾಗ ಮುಚ್ಚುವ ಹಂತಕ್ಕೆ ತಲುಪಿತು ಈಗ ಮತ್ತೆ ಆ ಕಾರ್ಯಕ್ರಮ ರಾಜ್ಯದ ಎಲ್ಲ ತಾಲೂಕು ಹಾಗೂ ನಗರ ಪ್ರದೇಶಗಳಲ್ಲಿ ಬಡವರಿಗೆ ಅನುಕೂಲ ಕಲ್ಪಿಸಲು ಪ್ರಾರಂಭಿಸಲಾಗುತ್ತದೆ ಎಂದರು.

ಇಂದಿನ ಸರ್ಕಾರದ ವ್ಯವಸ್ಥೆಯಲ್ಲಿ ಅಗ್ಗ ದರದ ಆಹಾರ ದೊರಕುವಂತಹ ಕೆಲಸ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಹಾಗೂ ಅವರ ಸಂಪುಟದಲ್ಲಿರತಕ್ಕಂತಹ ಎಲ್ಲ ಸದಸ್ಯರುಗಳಿಗೆ ನಾನು ಅಭಿಂದನೆ ಸಲ್ಲಿಸುತ್ತೇನೆಂದು ಹೇಳಿದ ಶಾಸಕ ನಾಡಗೌಡ ಅವರು ಇಂದು ಪ್ರಾರಂಭಗೊಂಡ ಇಂದಿರಾ ಕ್ಯಾಂಟಿನ ಬೆಳಿಗ್ಗೆ 8 ಗಂಟೆಯಿಂದ 10:30 ಗಂಟೆವರೆಗೂ (ನಾಸ್ಟಾ) ಕೊಡುವಲ್ಲಿ ಉಪ್ಪಿಟ್ಟು,ಶಿರಾ ಒಂದು ಪ್ಲೇಟಿಗೆ ಹಾಗೂ 3ಇಡ್ಲಿ 1ವಡಾ ಇರುವಂತ ಒಂದು ಪ್ಲೇಟಿಗೆ ಐದು ರೂಪಾಯಿಯಂತೆ ಆಕರಣೆಮಾಡಲಾಗುತ್ತದೆ ಅದರಂತೆ ಮಧ್ಯಾಹ್ನ ಊಟ ಅನ್ನ ಸಾಂಬಾರಾಗಿರಬಹುದು ರೊಟ್ಟಿ ಊಟ ಆಗಿರಬಹುದು ಮಧ್ಯಹ್ನ ಹಾಗೂ ಸಾಯಾಂಕಾಲದ ಒಂದು ಊಟಕ್ಕೆ 10 ರೂಪಾಯಿ ಆಕರಣೆಮಾಡಲಾಗುತ್ತದೆ ಎಂದರು. ಈ ಊಟಗಳಲ್ಲಿ ಚಪಾತಿ ಊಟ ಪಲ್ಲೆಗಳನ್ನೊಳಗೊಂಡು ದೊರೆಯಲಿದೆ ಎಂದು ಹೇಳಿದರು.

ಬಡಜನತೆ ಚಹಾದ ಅಂಗಡಿಗೆ ಹೋಗಿ ನೂರಾರು ರೂಪಾಯಿ ಖರ್ಚು ಮಾಡುವುದಕ್ಕಿಂಚ ಅದರ ಬದಲಾಗಿ ಇಂದಿರಾ ಕ್ಯಾಂಟಿನಗಳಲ್ಲಿ ಅಗ್ಗ ದರದಲ್ಲಿ ದೊರೆಯಲಾಗುತ್ತಿರುವ ಆರೋಗ್ಯಕರವಾದ ನಾಸ್ಟಾ ಊಟ ದಿನಕ್ಕೆ 300 ಜನತೆಗೆ ಅನೂಗುಣವಾಗಿ ದೊರೆಯಲಿರುವ ಈ ವ್ಯವಸ್ಥೆಯಲ್ಲಿ ಕೊಪನ್ ಸಿಸ್ಟಿಮ್ ಓಳಗೊಂಡಿರುತ್ತದೆ ಇದೇ ಕ್ಯಾಂಟೀನಲ್ಲೀಯ ಕೌಂಟರನಲ್ಲಿ ದೊರೆಯುತ್ತದೆ ಇದರ ಸದೂಪಯೋಗವನ್ನು ಬಡಜನತೆ ಪಡೆದುಕೊಳ್ಳಬೇಕೆಂದು ಹೇಳಿದ ಶಾಸಕ ನಾಡಗೌಡ ಅವರು ಶುಭ ಕೋರಿದರು.

ಪುರಸಭೆಯ ಅಧ್ಯಕ್ಷರಾದ ಶ್ರೀಮತಿ ಜುಬೇದಾ ಜಮಾದಾರ ಅವರು ರಿಬ್ಬನ್ ಕಟ್ ಮಾಡುವುದರೊಂದಿಗೆ ನೂತನ ಇಂದಿರಾ ಕ್ಯಾಂಟಿನಗೆ ಚಾಲನೆ ನೀಡಿದರು.

ಈ ಸಮಯದಲ್ಲಿ ತಾಳಿಕೋಟೆ ತಹಶೀಲದಾರರಾದ ಡಾ.ವಿನಯಾ ಹೂಗಾರ, ಪುರಸಭೆಯ ಉಪಾಧ್ಯಕ್ಷರಾದ ಶ್ರೀಮತಿ ಗೌರಮ್ಮ ಕುಂಬಾರ,ಮುಖ್ಯಾಧೀಕಾರಿ ಮೋಹನ ಜಾಧವ, ಪುರಸಭೆಯ ಸದಸ್ಯರುಗಳಾದ ಅಣ್ಣಪ್ಪ ಜಗತಾಪ, ಶ್ರೀಮತಿಅಕ್ಕಮಹಾದೇವಿಕಟ್ಟಿಮನಿ,ದುಂಡಪಗೌಡಪಾಟೀಲ, ಪರಶುರಾಮ ತಂಗಡಗಿ, ಮುದಕಣ್ಣ ಬಡಿಗೇರ, ನಿಂಗಣ್ಣ ಕುಂಟೋಜಿ, ಯಾಸೀನ ಮಮದಾಪೂರ,ನ್ಯಾಯವಾಧಿ ಆನಂದ ಮದರಕಲ್ಲ, ಮಾಜಿ ಸದಸ್ಯ ಪ್ರಭುಗೌಡ ಮದರಕಲ್ಲ, ಗಣ್ಯರಾದಎಂ.ಜಿ.ಪಾಟೀಲ,ಸಿದ್ದನಗೌಡಪಾಟೀಲ,ಜೈಭೀಮ ಮುತ್ತಗಿ,ಸಂಗನಗೌಡ ಅಸ್ಕಿ,ವಿ.ಸಿ.ಹಿರೇಮಠ(ಹಂಪಿ ಮುತ್ಯಾ),ಬಿ.ಎನ.ಹಿಪ್ಪರಗಿ, ಆರೋಗ್ಯ ನೀರಿಕ್ಷಕ ಜುಮನಾಳ, ಕೀರಿಯ ಆರೋಗ್ಯ ನೀರಿಕ್ಷಕ ಅಜಮನಿ,ಕಂದಾಯ ಅಧಿಕಾರಿ ಸುರೇಶ ಅಮರಣ್ಣವರ, ನೊಡಲ್ ಅಧಿಕಾರಿ ಜಗಧೀಶ ನಾಗಠಾಣ, ಜೋಶಿ, ಅವಕಜನಕ ಆಯ.ಎಚ. ಮಕಾನ್ದಾರ, ಎಫ್.ಸಿ.ಆರ್.ಶರಣಗೌಡ ಪೋಲಿಸಪಾಟೀಲ ಮೊದಲಾದವರು ಉಪಸ್ಥಿತರಿದ್ದರು.

# ರಕ್ತದಾನ ನೀಡುವುದರಿಂದ ಇನ್ನೊಬ್ಬರ ಪ್ರಾಣವನ್ನು ಉಳಿಸಲು ಪ್ರತಿಯೊಬ್ಬರು ರಕ್ತದಾನ ಮಾಡಿ ಮಾನವೀಯತೆ ಮೆರೆಯಬೇಕೆಂದರು ಕೃಷ್ಣ ಗ್ರಾಮ ಪಂಚಾಯತಿ ಅಧ್ಯಕ್ಷರು



**ಕೂಡ್ಲಿಗಿ :**ಕೂಡ್ಲಿಗಿ ತಾಲೂಕಿನ ಗುಡೆಕೋಟೆ ಗ್ರಾಮದಲ್ಲಿ ರಕ್ತದಾನದಿಂದ ರಕ್ತದೊತ್ತಡ, ಮಧುಮೇಹದಂತಹ ರೋಗಗಳು ನಿಯಂತ್ರಣಕ್ಕೆ ಬರುವುದರ ಜತೆಗೆ ಆತ್ಮತೃಪ್ತಿ ಸಿಗುತ್ತದೆ ಎಂದು ಗುಡೇಕೋಟೆ ಗ್ರಾಪಂ ಅಧ್ಯಕ್ಷ ಕೆ.ಕೃಷ್ಣ ತಿಳಿಸಿದರು. ತಾಲೂಕಿನ ಗುಡೇಕೋಟೆ ಗ್ರಾಮದಲ್ಲಿ ಬುಧವಾರ ಪ್ರಾಥಮಿಕ ಆರೋಗ್ಯ ಕೇಂದ್ರ ಗುಡೇಕೋಟೆ, ಗ್ರಾಪಂ ಕಚೇರಿ ಹಾಗೂ ಆರೋಹಣ ಸೊಸೈಟಿ ಫಾರ್ ಸೋಶಿಯಲ್ ಡೆವಲಪ್‌ಮೆಂಟ್ ವತಿಯಿಂದ ಏರ್ಪಡಿಸಿದ್ದ ರಕ್ತದಾನ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದರು.

ರಕ್ತದಾನ ಮನುಷ್ಯನ ದೈಹಿಕ ಮತ್ತು ಮಾನಸಿಕ ಆರೋಗ್ಯದಮೇಲೆಸಕಾರಾತ್ಮಕಪರಿಣಾಮಬೀರುತ್ತದೆ. ದೇಶದಲ್ಲಿ ಪ್ರತಿವರ್ಷ 41 ದಶಲಕ್ಷ ಯುನಿಟ್ ರಕ್ತದ ಕೊರತೆ ಎದುರಾಗುತ್ತಿದೆ. ಸಮಯಕ್ಕೆ ಸರಿಯಾಗಿ ರಕ್ತ ಸಿಗದೆ ವಿವಿಧ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳು, ಅಪಘಾತದ ಗಾಯಾಳುಗಳು ಮೃತಪಡುತ್ತಿದ್ದಾರೆ.

ಅಮೂಲ್ಯವದ ಜೀವಗಳನ್ನು ಉಳಿಸಲು ರಕ್ತದಾನ ಮಾಡುವುದು ಅತಿ ಅಗತ್ಯವಾಗಿದ್ದು, ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡಬೇಕು ಎಂದು ತಿಳಿಸಿದರು.

ಜನಸಾಮಾನ್ಯರಲ್ಲಿ ರಕ್ತದಾನದ ಬಗ್ಗೆ ತಪ್ಪು ಕಲ್ಪನೆಗಳಿದ್ದು ಹೋಗಲಾಡಿಸಬೇಕು. ಹೆಚ್ಚು ಜನರು ಸೇರುವ ಧಾರ್ಮಿಕ ಕೇಂದ್ರಗಳಲ್ಲಿ ನಿಯಮಿತವಾಗಿ ರಕ್ತದಾನ ಶಿಬಿರ ಆಯೋಜಿಸಿದರೆ ದೇಶದಲ್ಲಿನ ರಕ್ತದ ಕೊರತೆ ನೀಗಿಸಬಹುದು.

ಧಾರ್ಮಿಕ ಕೇಂದ್ರಗಳು ಪೂಜೆ ಪ್ರಾರ್ಥನೆಗಳಿಗೆ ಸೀಮಿತವಾಗಿರದೆ ಸಮಾಜಮುಖಿಯಾಗಿ ಸ್ಪಂದಿಸಬೇಕು ಎಂದು ಮನವಿ ಮಾಡಿದರು. ಗ್ರಾಪಂ ಸದಸ್ಯೆ ಸುನೀತಾ ತಿಪ್ಪೇಸ್ವಾಮಿ,

ವೈದ್ಯರಾದ ಡಾ.ಶ್ರೀಧರ, ಐಸಿಟಿಸಿ ಜಿಲ್ಲಾ ಮೇಲ್ವಿಚಾರಕ ಗಿರೀಶ್, ಪ್ರಾಥಮಿಕ ಆರೋಗ್ಯದ ಕೇಂದ್ರದ ಸಿಬ್ಬಂದಿ ಮಂಜುಳಾ, ಹಿರಿಯ ಆರೋಗ್ಯಧಿಕಾರಿ ಬಿ.ಎಸ್. ವಹಾಬ್, ನಿರಂಜನ್ ಮೂರ್ತಿ, ಕಟ್ಟೆಬಸಪ್ಪ, ಶಿವಪ್ರಸಾದ್, ಶೀಲಾ, ಸ್ವಪ್ನ, ಹೇಮಂತ, ಶೃತಿ, ಐಸಿಟಿಸಿ ಆಪ್ತ ಸಮಾಲೋಚಕ ಪ್ರಶಾಂತ ಕುಮಾರ್, ಪ್ರಯೋಗ ಶಾಲಾ ತಂತ್ರಜ್ಞ ಬೋರಣ್ಣ ಸೇರಿದಂತೆ ಅನೇಕರು ಇದ್ದರು.

# ಕನ್ನಡ ಭಾಷೆಯ ಬಗ್ಗೆ ಲಘು ಹೇಳಿಕೆ ಕಮಲ್ ಹಾಸನ್ ಕ್ಷಮೆ ಯಾಚಿಸಲಿ: ಕರವೇ ಜಿಲ್ಲಾಧ್ಯಕ್ಷ ಹುಲಗಪ್ಪ ಅಗ್ರಹ



**ಬಳ್ಳಾರಿ :** ಇತ್ತೀಚೆಗೆ ಚಲನಚಿತ್ರ ಕಾರ್ಯಕ್ರಮ ಒಂದರಲ್ಲಿ ಬೆಂಗಳೂರಿಗೆ ಆಗಮಿಸಿ ಕಾರ್ಯಕ್ರಮದಲ್ಲಿ ಪಾಲ್ಗೊಂಡ ತಮಿಳು ನಟ ಕಮಲಹಾಸನ್ ತಮಿಳು ಭಾಷೆಯಿಂದಲೇ ಕನ್ನಡ ಭಾಷೆ ಹುಟ್ಟಿದ್ದು ಎಂಬಂತಹ ಲಘುವಾದ ಹೇಳಿಕೆಯನ್ನು ನೀಡಿದ್ದಾರೆ, ಕಮಲ್ ಹಾಸನ್, ನಿಮಗೆ ಕನ್ನಡ ಭಾಷೆಯ ಬಗ್ಗೆ ಅರಿವಿಲ್ಲದಿದ್ದರೆ ಆ ವಿಷಯದ ಕುರಿತು ಮಾತನಾಡಬೇಡಿ ಭಾಷಾ ಅಲ್ಪಜ್ಞಾನ ಹೊಂದಿರುವ ನೀವು ಕನ್ನಡ ಭಾಷೆಯ ಬಗ್ಗೆ ನಮ್ಮ ಕನ್ನಡ ಖ್ಯಾತ ಹಿರಿಯ ಸಾಹಿತಿಗಳ ಹತ್ತಿರ ಕೇಳಿ ತಿಳಿದುಕೊಂಡು ಮಾತನಾಡಿ, ಇತ್ತೀಚಿನ ನಿಮ್ಮ ಹೇಳಿಕೆಯಿಂದ ಕನ್ನಡಿಗರಿಗೆ ನೋವಾಗಿದೆ ಕೂಡಲೇ ನೀವು ಆರು ಕೋಟಿ ಕನ್ನಡಿಗರ ಕ್ಷಮೆ ಯಾಚಿಸಬೇಕೆಂದು ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ್ ಶೆಟ್ಟಿ ಬಣದ ಬಳ್ಳಾರಿ ಜಿಲ್ಲಾಧ್ಯಕ್ಷ ಬಿಎಚ್ ಹುಲುಗಪ್ಪ ಆಗ್ರಹಿಸಿದರು.

ಅವರು ಇಂದು ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಪತ್ರವನ್ನು ನೀಡಿ ಮಾತನಾಡಿ, ಎರಡು ಮೂರು ಸಾವಿರ ವರ್ಷದ ಇತಿಹಾಸವಿರುವ ಕನ್ನಡ ಭಾಷೆ, ದೇಶದ ಭಾಷೆಗಳಲ್ಲಿಯೇ ಅತ್ಯಂತ ಪ್ರಾಚೀನವಾದ ಇತಿಹಾಸವನ್ನು ಹೊಂದಿದ ಭಾಷೆಯಾಗಿದೆ, ಎಂಟು ಜ್ಞಾನಪೀಠ ಪ್ರಶಸ್ತಿ, ಸರಸ್ವತಿ ಸಮ್ಮಾನ್ ಪ್ರಶಸ್ತಿ ಅಷ್ಟೇ ಅಲ್ಲದೆ ಇತ್ತೀಚೆಗೆ ವಿಶ್ವದ ಪ್ರತಿಷ್ಠಿತ ಬೂಕರ್ ಪ್ರಶಸ್ತಿಯನ್ನು ಪಡೆದ ಹೆಗ್ಗಳಿಕೆ ಕನ್ನಡ ಭಾಷೆಯದ್ದಾಗಿದೆ ಇದನ್ನು ನೀವು ತಿಳಿದುಕೊಳ್ಳದೆ

ಕನ್ನಡ ಭಾಷೆಯ ಬಗ್ಗೆ ಲಘುವಾಗಿ ಮಾತನಾಡಿರುವುದು ಸಹಜವಾಗಿ ಕನ್ನಡಿಗರನ್ನು ಕೆರಳಿಸಿದೆ, ನೀವು ಕನ್ನಡಿಗರಲ್ಲಿ ಕ್ಷಮೆ ಕೇಳಲೇಬೇಕು,

ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ನಿಮ್ಮ ಚಲನಚಿತ್ರಗಳನ್ನು ರಾಜ್ಯದಲ್ಲಿ ಪ್ರದರ್ಶನಗೊಳ್ಳಲು ಬಿಡುವುದಿಲ್ಲ ಎಂದು ಎಚ್ಚರಿಕೆಯನ್ನು ನೀಡಿದರು.

ಈ ಸಂದರ್ಭದಲ್ಲಿ ವೇದಿಕೆಯ ರಾಜ್ಯ ಸಂಚಾಲಕ ಅದ್ದಿಗೇರಿ ರಾಮಣ್ಣ, ಜಿಲ್ಲಾ ಉಪಾಧ್ಯಕ್ಷ ವೀರಾರೆಡ್ಡಿ, ಆನಂದ್, ಜಂಟಿ ಕಾರ್ಯದರ್ಶಿ ಕೆ ವೆಂಕಟೇಶ್, ಕಾನೂನು ಸಲಹೆಗಾರ ಎ ರಾಮಾಂಜಿನಿ, ಸಿದ್ದನಗೌಡ ಸೇರಿದಂತೆ ಇತರರು ಇದ್ದರು.

# ಅಕ್ರಮ ಮರಳು ದಂಧೆ ಕೋರರ ಪರವಾನಿಗೆಯನ್ನು ರದ್ದು ಪಡಿಸಿ: ಅಂಗಡಿ ಶಂಕರ್ ಆಗ್ರಹ




**ಬಳ್ಳಾರಿ :** ತಾಲೂಕಿನ ಗ್ರಾಮಾಂತರ ಪ್ರದೇಶದ ತೊಲಮಾಮಿಡಿ, ಯಾಳ್ಪಿ ಹಗರಿ ಸೇರಿದಂತೆ ಇತರ ಗ್ರಾಮಗಳಲ್ಲಿ ಎಂ ರಾಮಕೃಷ್ಣರಾವ್ ಎಂಬುವರು ಮರಳು ಲೈಸೆನ್ಸ್ ಪಡೆದುಕೊಂಡು ಮರಳು ಗಣಿಗಾರಿಕೆಯನ್ನು ನಡೆಸಿದ್ದಾರೆ. ಅವರು ಪಡೆದ ಗುತ್ತಿಗೆ ಅವಧಿ ಮುಗಿದಿದ್ದು ಈಗಲೂ ಸಹ ಅವರು ಅಕ್ರಮವಾಗಿ ಮರಳು ಗಣಿಗಾರಿಕೆ ನಡೆಸುತ್ತಿದ್ದಾರೆ ಅವರ ಮೇಲೆ ಕಾನೂನು ಕ್ರಮ ಕೈಗೊಂಡು ಅವರ ಗುತ್ತಿಗೆಯನ್ನು ರದ್ದುಪಡಿಸಬೇಕು ಮತ್ತು ಅವರನ್ನು ಕಪ್ಪುಪಟ್ಟಿಗೆ ಸೇರಿಸಬೇಕೆಂದು ಕರ್ನಾಟಕ ರಕ್ಷಣಾ ವೇದಿಕೆ ನಾರಾಯಣಗೌಡ ಬಣದ ಜಿಲ್ಲಾಧ್ಯಕ್ಷರಾದ ಅಂಗಡಿ ಶಂಕರ್ ಜಿಲ್ಲಾಧಿಕಾರಿಗಳನ್ನು ಆಗ್ರಹಿಸಿದರು.

ಅವರು ಇಂದು ವೇದಿಕೆಯ ಹಲವಾರು ಕಾರ್ಯಕರ್ತರೊಂದಿಗೆ ಜಿಲ್ಲಾಧಿಕಾರಿಗಳ ಕಚೇರಿಗೆ ಆಗಮಿಸಿ ಮನವಿ ಪತ್ರವನ್ನು ನೀಡಿ ಮಾತನಾಡಿ, ರಾಮಕೃಷ್ಣರಾವ್ ಎನ್ನುವರು ತಾವು ಗುತ್ತಿಗೆ ಪಡೆದಿದ್ದ ಸ್ಥಳವನ್ನು ಬಿಟ್ಟು ಬೇರೆ ಕಡೆಯಿಂದ ಅಕ್ರಮವಾಗಿ ಮರಳು ತಂದು ತಮ್ಮ ಸ್ಟಾಕ್ ಯಾರ್ಡ್‌ನಲ್ಲಿ ಸಂಗ್ರಹಿಸಿ ಇಟ್ಟುಕೊಂಡಿದ್ದಾರೆ ಈ ಮರಳನ್ನು ದುಬಾರಿ ಬೆಲೆಗೆ ಮಾರುಕಟ್ಟೆಯಲ್ಲಿ ಮಾರಾಟ ಮಾಡಿ ಲಾಭವನ್ನು ಪಡೆಯುತ್ತಿದ್ದಾರೆ. ಇದನ್ನು ಯಾರಾದರೂ ಪ್ರಶ್ನಿಸಿದಲ್ಲಿ ಇದನ್ನು ನಾನು ಗುತ್ತಿಗೆ ಪಡೆದಿದ್ದೇನೆ ಎಂದು ಹೇಳಿ ಅವರ ಬಾಯಿ ಮುಚ್ಚಿಸುತ್ತಾರೆ, ಇವರ ಈ ಮರಳು ದಂದೆಗೆ ಜಿಲ್ಲಾ ಖನಿಜ ಅಧಿಕಾರಿಗಳು ಮತ್ತು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿಗಳು ಸಹ ಸಾತ್ ನೀಡುತ್ತಿದ್ದಾರೆ ಈ ಅಕ್ರಮ ಮರಳು ದಂಧೆ ಕೋರ ರಾಮಕೃಷ್ಣರಾವ್ ಅವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಂಡು ಅವರು ಸಂಗ್ರಹಿಸಿ ಇಟ್ಟುಕೊಂಡಿರುವ ಮರಳನ್ನು ಸೀಸ್ ಮಾಡಿ ಸರ್ಕಾರದ ವಶಕ್ಕೆ ಪಡೆಯಬೇಕೆಂದು ಜಿಲ್ಲಾಧಿಕಾರಿಗಳನ್ನು ಒತ್ತಾಯಿಸಿದರು.

ಅದೇ ರೀತಿಯಲ್ಲಿ ಮತ್ತೊಬ್ಬ ಗುತ್ತಿಗೆದಾರ ಗಾದಿಲಿಂಗಪ್ಪ ಎನ್ನುವವರು ಸಹ ಮರಳು ಗಣಿಗಾರಿಕೆ ಗುತ್ತಿಗೆಯನ್ನು ಪಡೆದುಕೊಂಡಿದ್ದು ಅವರು ಸಹ ಒಂದು ಪರಮಟ್ಟಿಗೆ ಐದಾರು ಲಾರಿ ಲೋಡುಗಳಷ್ಟು ಮರುಳನ್ನು ಕಾಳದಂತೆಯಲ್ಲಿ ಮಾರಾಟ ಮಾಡುತ್ತಿದ್ದಾರೆ ಇದರಿಂದ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿ ನಷ್ಟವನ್ನು ಉಂಟುಮಾಡುತ್ತಿದ್ದಾರೆ ಇವರ ಜೊತೆಗೆ ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳು ಚಾರ್ಮಿಳಾಗಿ ಎಗ್ಗಿಲ್ಲದೆ

ಅಕ್ರಮವಾಗಿ ಮರಳುಗಾರಿಕೆಯನ್ನು ನಡೆಸುತ್ತಿದ್ದಾರೆ ಕೂಡಲೇ ಜಿಲ್ಲಾಡಳಿತ ಈ ಅಕ್ರಮ ಮರಳು ದಂಧೆ ಗೌರವ ವಿರುದ್ಧ ಕ್ರಮ ಕೈಗೊಂಡು ಇವರ ಪರವಾಗಿಯನ್ನು ರದ್ದುಪಡಿಸಬೇಕೆಂದು ಒತ್ತಾಯಿಸಿದರು.

ಈ ಪ್ರತಿಭಟನೆಯಲ್ಲಿ ಕುರುಗೋಡು ತಾಲೂಕು ಅಧ್ಯಕ್ಷ ಗಣಿಕಾಳು ವೀರೇಶ್, ಬಳ್ಳಾರಿ ತಾಲೂಕು ಅಧ್ಯಕ್ಷ ದಿವಾಕರ್ ಸೇರಿದಂತೆ ಹಲವಾರು ಜನ ವೇದಿಕೆಯ ಕಾರ್ಯಕರ್ತರು ಇದ್ದರು.

# ಬಳ್ಳಾರಿ ಜಿಲ್ಲಾ ಉಪಾಧ್ಯಕ್ಷರಾಗಿ ವೀರಾರೆಡ್ಡಿ ನೇಮಕ



**ಬಳ್ಳಾರಿ :** ಕರ್ನಾಟಕ ರಕ್ಷಣಾ ವೇದಿಕೆಯ ಪ್ರವೀಣ್ ಶೆಟ್ಟಿ ಬಣದ ಬಳ್ಳಾರಿ ಜಿಲ್ಲಾ ಉಪಾಧ್ಯಕ್ಷರನ್ನಾಗಿ ವೀರಾರೆಡ್ಡಿ ಯವರನ್ನು ನೇಮಕಮಾಡಿ ವೇದಿಕೆಯ ರಾಜ್ಯ ಸಂಚಾಲಕ ಅದ್ದಿಗೇರಿ ರಾಮಣ್ಣ ಮತ್ತು ಜಿಲ್ಲಾಧ್ಯಕ್ಷ ಬಿಎಚ್ ಹುಲುಗಪ್ಪ ಆದೇಶ ಪತ್ರವನ್ನು ನೀಡಿ, ವೇದಿಕೆಯ ನಿಯಮ ನಿಬಂಧನೆಗಳಿಗೆ ಒಳಪಟ್ಟು ಕನ್ನಡಪರ ಚಟುವಟಿಕೆಗಳಲ್ಲಿ ಭಾಗವಹಿಸಿ ಎಲ್ಲಾ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಲು ಸೂಚಿಸಿದರು.

ಜಿಲ್ಲಾಧ್ಯಕ್ಷರು ಮತ್ತು ರಾಜ್ಯ ಸಂಚಾಲಕರು ನನ್ನ ಮೇಲೆ ವಿಶ್ವಾಸವಿಟ್ಟು ನನ್ನನ್ನು ವೇದಿಕೆಯ ಜಿಲ್ಲಾ ಉಪಾಧ್ಯಕ್ಷರನ್ನಾಗಿ ನೇಮಕ ಮಾಡಿದ್ದಾರೆ, ಅವರ ವಿಶ್ವಾಸವನ್ನು ಹುಸಿಗೊಳಿಸದೆ ವೇದಿಕೆಯ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿ ಸಂಘಟನೆಗೆ ಶ್ರಮಿಸುತ್ತೇನೆ ಎಂದು ನೂತನ ಜಿಲ್ಲಾ ಉಪಾಧ್ಯಕ್ಷ ವೀರಾರೆಡ್ಡಿ ತಿಳಿಸಿದರು.

**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State

Designed by MKG-9535762618